## ಪೂಜ್ಯಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿಯವರು



ಪೂಜ್ಯಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿಯವರು ಚಿನ್ಮೂಲಾದ್ರಿಯ ಚಿತ್ಕಳೆಯಾಗಿ 1946ರಲ್ಲಿ ಚಿತ್ರದುರ್ಗದಲ್ಲಿ ಜನಿಸಿ ವಿಜ್ಞಾನ, ತತ್ವಜ್ಞಾನಗಳ ಸ್ನಾತಕೋತ್ತರ ಪದವೀಧರೆಯಾಗಿ 1966 ರಲ್ಲಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರಿಂದ ಜಂಗಮದೀಕ್ಷೆ ಪಡೆದು ಮಾತೆ ಮಹಾದೇವಿ ಎಂಬ ಅಬಿಧಾನ ತಾಳಿ 1970ರಲ್ಲಿ ವಿಶ್ವವಿನೂತನ ಸ್ತ್ರೀ ಜಗದ್ಗುರು ಪೀಠವನ್ನಲಂಕರಿಸಿ ಭಕ್ತಿ -ಜ್ಞಾನ ವಿರಕ್ತಿಗಳ ದಿವ್ಯ ಸಂಗಮವಾಗಿ ಶೋಭಿಸುತ್ತಿರುವವರು 'ಮಾತಾಜಿ' ಎಂದು ಆತ್ಮೀಯ ಭಕ್ತರಿಂದ ಕರೆಸಿಕೊಳ್ಳುತ್ತಿರುವ. ಇವರು ಕಿರಿದಾದ ವಯಸ್ಸಿನಲ್ಲಿಯೇ ಹಿರಿದಾದ ಜ್ಞಾನಗಳಿಸಿ ಜಗದ ಜಾಗೃತಿಗಾಗಿ ಆ ಜ್ಞಾನ ಸುಧೆಯನ್ನು ಪ್ರವಚನ ಗ್ರಂಥಗಳ ಮೂಲಕ ಜನತೆಗೆ ಧಾರೆಯೆರೆಯುತ್ತಲಿರುವವರು.


ಶ್ರೀ ಮಾತೆಯವರ ಮೊದಲ ಕಾದಂಬರಿ 'ಹೆಪ್ಪಿಟ್ಟ ಹಾಲು' ರಾಜ್ಯ ಸಾಹಿತ್ಯ ಅಕ್ಯಾಡೆಮಿಯ ಬಹುಮಾನವನ್ನು ಪಡೆದಿದೆ. ಅಕ್ಕಮಹಾದೇವಿಯ ಜೀವನವನ್ನು ಕುರಿತಾದ 'ತರಂಗಿಣಿ' ಮಾತೆಯವರ ಸಿದ್ಧ ಹಸ್ತದಲ್ಲಿ ರೂಪುಗೊಂಡ ದ್ವಿತೀಯ ಕಾದಂಬರಿ. ಅವರು ಬರೆದ ಇನ್ನಿತರ ಶ್ರೇಷ್ಠ ಕೃತಿಗಳು ಬಸವ ತತ್ವ ದರ್ಶನ, ಹಿಂದೂಯಾರು?, ಲಿಂಗಾಯತ ಧರ್ಮ ಕೈಪಿಡಿ ಮುಂತಾದವು.

ನಿರ್ಭಿತ ನಿಲುವು, ತತ್ವನಿಷ್ಠೆ, ಸತ್ಯಪ್ರಿಯತೆ, ಸಮಾಜೋದ್ಧಾರದ ಕಳಕಳಿ ಇವುಗಳಿಂದ ವೈಶಿಷ್ಟಪೂರ್ಣರಾಗಿರುವ ಮಾತಾಜಿಯವರು ತಮ್ಮ ಅಮೋಘ ವಾಣಿಯಿಂದ ಜನರನ್ನು ಆಕರ್ಷಿಸಿ ಮುದಗೊಳಿಸಿ, ಚೇತನಿಸುತ್ತಾರೆ ದೈವೀದತ್ತ ಪ್ರತಿಭೆ, ಅಸಾಮಾನ್ಯ ಪಾಂಡಿತ್ಯ, ದಿವ್ಯ ಮಧುರವಾಣಿ, ಪ್ರಶಾಂತ ಚಿತ್ತಗಳ ಸಂಗಮವಾದ ಮಾತಾಜಿಯವರು ವಿಶ್ವಧರ್ಮದ ಮಣಿಹ ಹೊತ್ತು ಸ್ವದೇಶ - ವಿದೇಶಗಳಲ್ಲೂ ಸಂಚರಿಸಿ ಭಾರತದ ಆಧ್ಯಾತ್ಮಿಕ ಸಂದೇಶವನ್ನು ಯಶಸ್ವಿಯಾಗಿ ಸಾರುತ್ತಿದ್ದಾರೆ.

ಧರ್ಮಪಿತ ಬಸವಣ್ಣನವರ

# ಕಾಲ ನಿರ್ಣಯ

– ಮಾತಾಜಿ



## ವಿಶ್ವಗುರು ಬಸವಣ್ಣನವರ ಜೀವಿತದ ಕೆಲವು ಖಚಿತ ವಿವರಗಳು

Dharma Pitha Basavannanavaru - Kala Nirnaya :- a book with Three essays written by Pujya Sri Jagadguru Mathe Mahadevi (Mataji), Basava Mantapa, 2035, 20th Main, 2nd Block, Rajajinagar, Bangalore - 560 010

© Viswakalyana Mission, Publisher.

ಮೊದಲನೆ ಆವೃತ್ತಿ - 1995
ಎರಡನೆಯ ಆವೃತ್ತಿ -2006

ಬೆಲೆ : **30=00** ರೂ.ಗಳು.

*ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಪುಸ್ತಕಗಳು ಮತ್ತು ಕೆಸೆಟ್‌ಗಳು ಮಾರಾಟಕ್ಕೆ ಸಿಕ್ಕುವ ಸ್ಥಳಗಳು :*

**ವಿಶ್ವಕಲ್ಯಾಣ ಮಿಷನ್, ಬಸವಮಂಟಪ,**
2035, 20ನೆಯ ಮೇನ್, 2ನೆಯ ಬ್ಲಾಕ್
ಕಾರ್ಡ್ ರಸ್ತೆ, ರಾಜಾಜಿನಗರ,
ಬೆಂಗಳೂರು - 560 010 ☎ 23325335

**ಬಸವ ಧರ್ಮ ಪೀಠ**
ಮಹಾಮನೆ ಮಹಾಮಠ
ಕೂಡಲ ಸಂಗಮ - 587 115
ತಾ - ಹುನಗುಂದ, ಜಿಲ್ಲೆ- ಬಾಗಲಕೋಟೆ ☎ 08351-268038, 268007

**ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ**
ಉಳವಿ ರಸ್ತೆ, ರೈಲ್ವೆ ಗೇಟ್ ಬಳಿ
ಧಾರವಾಡ - 580 003 ☎ 08365577965

**ಬಸವ ಮಹಾಮನೆ, ಶರಣಲೋಕ**
ಬಸವಕಲ್ಯಾಣ - 585327
ಜಿ - ಬೀದರ ☎ 08481-251921, 252856



# ಧರ್ಮಪಿತ ಬಸವಣ್ಣನವರು

## - ಕಾಲ ನಿರ್ಣಯ-

(ಮತ್ತು ಇತರ ಲೇಖನಗಳು)

**ಒಳಗೆ ಏನಿದೆ ?**

| | | ಪುಟ |
|---|---|---|
| 1. | ಕಾಲ ನಿರ್ಣಯ | 1 |
| 2. | ವಿಶ್ವಜ್ಯೋತಿ ಬಸವಣ್ಣ - ಸಂಕ್ಷಿಪ್ತ ಚರಿತ್ರೆ | 20 |
| 3. | ಕಾಲಜ್ಞಾನ ವಚನಗಳ ಆಧಾರದ ಮೇಲೆ ಭೂತ-ಭವಿಷ್ಯತ್ ನಿರ್ಣಯ | 27 |

## ಪುಸ್ತಕಕ್ಕೆ ಮೊದಲ ಮಾತು

ವಿಶ್ವಗುರು ಬಸವಣ್ಣನವರ ಜನನ, ಲಿಂಗೈಕ್ಯ ಕುರಿತಾಗಿ ಖಚಿತ ವಿವರಗಳು ಸಿಕ್ಕಿದ್ದರಿಂದ, ಅವನ್ನು ಪ್ರಕಟಿಸಿ ಜನರಲ್ಲಿ ಇರುವ ಅಸ್ಪಷ್ಟತೆ ನಿವಾರಿಸಬೇಕೆಂದು ಈ ಪುಸ್ತಕ ಹೊರತರುತ್ತಿದ್ದೇವೆ. ಅತ್ಯಂತ ಸಂಕ್ಷಿಪ್ತವಾಗಿ ಜೀವನ ಚರಿತ್ರೆಯನ್ನು ಸಹ ಲೇಖನವನ್ನಾಗಿ ಪ್ರಕಟಿಸಲಾಗಿದೆ.

ಈ ನಿರ್ಣಯ ಕೈಗೊಳ್ಳಲು ನೆರವಾದ ಕೆಲವು ಗ್ರಂಥಗಳೆಂದರೆ :

1. ಡಾ|| ಬಾಡಾಲ ರಾಮಯ್ಯನವರ ಬಸವೇಶ್ವರ ವಚನಾಲು
2. ಡಾ|| ಆರ್. ಸಿ. ಹಿರೇಮಠರ ಷಟಸ್ಥಲ ಪ್ರಭೆ
3. ಶ್ರೀ ಶಿವರುದ್ರಯ್ಯ ಸಾಲೀಮಠರ ಕಾಲಜ್ಞಾನ ವಚನಗಳು

ಭಾರತೀಯ ಸಂವತ್ಸರಗಳ ಒಂದು ಯಾದಿಯನ್ನು ಕ್ರಿಸ್ತಶಕಕ್ಕೆ ಪರಿವರ್ತಿಸಿ 1087 ರಿಂದ 2046 ರ ವರೆಗೆ ಬಸವ ಕಲ್ಯಾಣದ ಶೂನ್ಯ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿಯವರು ಸಿದ್ಧಪಡಿಸಿದ್ದು ನಮಗೆ ಬಹಳಷ್ಟು ಸಹಾಯಕವಾಯಿತು.

ಆದ್ದರಿಂದ ಇವರೆಲ್ಲರಿಗೂ ನಮ್ಮ ಧನ್ಯವಾದಗಳು.

2-5-95 — ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
862 ನೇ ಬಸವಜಯಂತಿ — ಬೆಂಗಳೂರು

# ವಿಶ್ವಗುರು ಬಸವಣ್ಣನವರು

-ಮಡಿವಾಳ ಮಾಚಿದೇವರು

★ ಅಂಗಾಲಕಣ್ಣವರಾಗಬಹುದಲ್ಲದೆ
ಮೈಯೆಲ್ಲ ಕಣ್ಣವರಾಗಬಾರದು.
ಮೈಯೆಲ್ಲ ಕಣ್ಣವರಾಗಬಹುದಲ್ಲದೆ
ನೊಸಲ ಕಣ್ಣು ಚತುರ್ಭುಜರಾಗಬಾರದು
ನೊಸಲಕಣ್ಣು ಚತುರ್ಭುಜದವರಾಗಬಹುದಲ್ಲದೆ
ಪಂಚವಕ್ತ್ರ ದಶಭುಜದವರಾಗಬಾರದು.
ಪಂಚವಕ್ತ್ರ ದಶಭುಜದವರಾಗಬಹುದಲ್ಲದೆ
ಸರ್ವಾಂಗ ಲಿಂಗವಾಗಬಾರದು.
ಸರ್ವಾಂಗಲಿಂಗಿಗಳಾಗಬಹುದಲ್ಲದೆ ಕಲಿದೇವಯ್ಯಾ,
ನಿಮ್ಮ ಶರಣ ಬಸವಣ್ಣನಾಗಬಾರದೆಂದರಿದು.
ಆ ಬಸವಣ್ಣನ ಶ್ರೀ ಪಾದಕ್ಕೆ ನಮೋ ನಮೋ ಎನುತಿರ್ದೆನು.

★ ಅಯ್ಯಾ ನಿಮ್ಮ ಧ್ಯಾನದಲ್ಲಿರಿಸಲೊಲ್ಲದೆ ಬಸವಣ್ಣನ ಧ್ಯಾನದಲ್ಲಿರಿಸಯ್ಯಾ ಎನ್ನನು.
ಲಿಂಗವೇದ್ಯ ಬಸವಣ್ಣ, ಜಂಗಮವೇದ್ಯ ಬಸವಣ್ಣ
ಪ್ರಸಾದವೇದ್ಯ ಬಸವಣ್ಣ, ನಿಜಪದವೇದ್ಯ ಬಸವಣ್ಣ ಮಹಾವೇದ್ಯ ಬಸವಣ್ಣ
ಇಂತು ಬಸವಣ್ಣನ ಸಂಗದಲ್ಲಿರಿಸು, ಕಲಿದೇವರದೇವ.

★ ಎನ್ನ ಕಾಯ ಬಸವಣ್ಣನ ಪೂಜಿಸಲಿಕಾಯಿತ್ತು
ಎನ್ನ ಜೀವ ಬಸವಣ್ಣನ ನೆನೆಯಲಿಕಾಯಿತ್ತು
ಎನ್ನ ಶ್ರೋತ್ರ ಬಸವಣ್ಣನ ಚಾರಿತ್ರವ ಕೇಳಲಿಕಾಯಿತ್ತು
ಎನ್ನ ಪ್ರಾಣ ಬಸವಣ್ಣನ ಸ್ತುತಿಸಲಿಕಾಯಿತ್ತು
ಎನ್ನ ನೇತ್ರ ಬಸವಣ್ಣನ ಸರ್ವಾಂಗವ ನೋಡಲಿಕಾಯಿತ್ತು
ಇಂತೆನ್ನ ಪಂಚೇಂದ್ರಿಯಂಗಳು ಕಲಿಗಳಾಗಿ
ಬಸವಣ್ಣನ ಹಿಡಿಯಲಿಕಾಯಿತ್ತು
ಬಸವಣ್ಣನ ಅರಿವಿನೊಳಗೆ ನಾನಿದ್ದೆನು.
ಬಸವಣ್ಣನ ಮರಹಿನೊಳಗೆ ನಾನಿದ್ದೆನು ಕಾಣಾ ಕಲಿದೇವರ ದೇವಾ.

★ ಗುರುಭಕ್ತಿಯಲ್ಲಿಪ್ಪ, ಲಿಂಗಭಕ್ತಿಯಲ್ಲಿಪ್ಪ,
ಜಂಗಮಭಕ್ತಿಯಲ್ಲಿಪ್ಪ, ಪ್ರಸಾದದಲ್ಲಿಪ್ಪ,
ಜಂಗಮಕ್ಕೆ ಮಾಡುವಲ್ಲಿಪ್ಪ, ಮಾಡಿಸಿಕೊಂಬಲ್ಲಿಪ್ಪ,
ತನು ಮನ ಧನ ಒಂದಾಗಿ ನಿವೇದಿಸುವಲ್ಲಿಪ್ಪ,
ಸಂಪೂರ್ಣಾತ್ಮನೆಂದು ನಿತ್ಯಂಗೆ ನೀವು ಕಾರುಣ್ಯವ ಮಾಡಿದಿರಿ.
ನಿಮ್ಮ ಕಾರುಣ್ಯ ಕಟಾಕ್ಷದಲ್ಲಿ ಬಸವಣ್ಣನಲ್ಲದೆ ಮಾಡುವರಿಲ್ಲ,
ಆ ಬಸವಣ್ಣ ಹೇಳಿತ್ತ ಮೀರೆ ಕಾಣ, ಕಲಿದೇವರದೇವ.

★ ಶಿವ ತಾನೀತ ಮರ್ತ್ಯಲೋಕವ ಪಾವನವ ಮಾಡಲು,
ಗುರು ತಾನೀತ ಎನ್ನ ಭವರೋಗವ ವೇಧಿಸಲು,
ಭಕ್ತ ತಾನೀತ ಎನಗೆ ವಿಸ್ತಾರವಾಗಿ.
ಎನಗೆ ಜಂಗಮ ತಾನೀತ ಅನಾದಿ ಸಂಸಿದ್ಧ ಘನಮಹಿಮನಾಗಿ.
ಲಿಂಗ ತಾನೀತ ಎನಗೆ ಪ್ರಾಣಲಿಂಗ ತಾನಾಗಿ.
ಎನ್ನ ವಿಸ್ತಾರ ತಾನೀತ ಎನ್ನ ನಿಲುಕಡೆಯು ಎನಾಗಿ.
ಎನಗೆ ಸರ್ವಸ್ವಾಯತವ ಮಾಡಿದ ಮಹಿಮ ತಾನೀತ ಕಾಣಾ,
ಕಲಿದೇವರದೇವ, ನಿಮ್ಮ ಶರಣ ಬಸವಣ್ಣ.



# 1. - ಕಾಲ ನಿರ್ಣಯ -

## ವಿಶ್ವಗುರು ಬಸವಣ್ಣನವರ ಜನ್ಮ ದಿನ ಮತ್ತು ಜೀವಿತಾವಧಿ ಕುರಿತು

ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಆಗಿ ಹೋದ ಸಮತಾವಾದಿ, ಕ್ರಾಂತಿಯೋಗಿ, ಸ್ವತಂತ್ರ ವಿಚಾರವಾದಿ, ಉತ್ತುಂಗ ಸಾಹಿತಿ, ಶ್ರೇಷ್ಠ ಅನುಭಾವಿ, ಉತ್ತಮ ರಾಜಕಾರಣ ಮುತ್ಸದ್ದಿ. ಪರಮಾತ್ಮನ ಸೃಷ್ಟಿಯಾದ ಈ ಮರ್ತ್ಯದಲ್ಲಿ ಕರ್ತನೆಂಬ ಕಲಾವಿದ ಕಟ್ಟಿದ ಬಹು ಶ್ರೇಷ್ಠ ಶಿಲ್ಪ ವಿಶ್ವಗುರು ಬಸವಣ್ಣನವರು. ಶಿಲ್ಪಿಯು ಹಲವಾರು ಮೂರ್ತಿಗಳನ್ನು ಕಟೆದರೂ ಕೆಲವು ಮಾತ್ರ ಶಿಲ್ಪಿಯನ್ನು ಅಮರವಾಗಿ ಮಾಡುವಂತೆ ಪರಮಾತ್ಮನನ್ನು ಕೀರ್ತಿ ವಿಶೇಷಿತನನ್ನಾಗಿ ಮಾಡಿದವರು ಬಸವಣ್ಣನವರು. ದೇವನ ಕರುಣೆಯನ್ನು ಅದ್ಭುತವಾಗಿ ಮೈಗೂಡಿಸಿಕೊಂಡು ಪ್ರಗತಿಪರ ವಿಚಾರಧಾರೆಯ ಪ್ರತಿಪಾದಕರಾಗಿ ಬಸವಣ್ಣನವರು ತಮ್ಮ ಕಾಲಕ್ಕಿಂತಲೂ ಶತ ಶತಮಾನಗಳ ಮುಂದೆ ಇದ್ದುದರಿಂದ, ಈಗೀಗ ಶತಮಾನಗಳು ಸರಿದಂತೆಲ್ಲ ಅವರು ಹೆಚ್ಚು ಹೆಚ್ಚು ಅರ್ಥವಾಗುತ್ತಿದ್ದಾರೆ; ಬಯಲ ಬ್ರಹ್ಮನಾಗಿ ಬೆಳೆದು ನಿಂತು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವವನನ್ನು ಮೂಕವಿಸ್ಮಿತನನ್ನಾಗಿ ಮಾಡುತ್ತಿದ್ದಾರೆ.

ಇಂತಹ ವಿಶ್ವವಿಭೂತಿ ಬಸವಣ್ಣನವರ ಜೀವಿತದ ಕಾಲಾವಧಿ, ಹುಟ್ಟಿದ ಮತ್ತು ಲಿಂಗೈಕ್ಯರಾದ ದಿವಸ, ಈ ಬಗ್ಗೆ ಹೆಚ್ಚಿನ ತಿಳುವಳಿಕೆ ಹೊಂದುವುದು ಅತ್ಯಗತ್ಯವಾಗಿದೆ. ಭಾರತ ದೇಶದಲ್ಲಿ ಹುಟ್ಟಿದ ಅನೇಕ ಮಹಾತ್ಮರನ್ನು ಕುರಿತು ಲಭ್ಯವಾಗುವ ಐತಿಹಾಸಿಕ ದಾಖಲೆಗಳು, ದಿನಾಂಕಗಳು ಬಹಳ ಅಸ್ಪಷ್ಟವಾಗಿರುತ್ತವೆ. ಮುಖ್ಯ ಕಾರಣವೇನೆಂದರೆ ಶರಣರು, ಮಹಾತ್ಮರು ಶರೀರದ ಹುಟ್ಟನ್ನು, ಶರೀರಕ್ಕೆ ಜನ್ಮವಿತ್ತ ತಾಯಿ-ತಂದೆಯರನ್ನು ತಮ್ಮ ಬರಹಗಳಲ್ಲಿ ಉಲ್ಲೇಖಿಸದಿರುವುದು. ತಮ್ಮ ಬರಹಗಳಲ್ಲಿ ಮಹಾತ್ಮರು ದೀಕ್ಷೆ ಪಾರಮಾರ್ಥಿಕ ಘಟನೆಗಳು, ಗುರುಕಾರುಣ್ಯ, ಸಾಕ್ಷಾತ್ಕಾರ ಮುಂತಾದುವನ್ನು ಮಾತ್ರ ಪ್ರಸ್ತಾಪಿಸುವ ಕಾರಣ ದೀಕ್ಷಾಪೂರ್ವದ ವಿವರಗಳು ಲಭ್ಯವಾಗುವುದು ಬಲು ಕಡಿಮೆ. ಆ ಮೇಲಿನ ಜೀವನದಲ್ಲಾದರೂ ಅಷ್ಟೆ ತಮ್ಮ ವೈಯಕ್ತಿಕ ಜೀವನವನ್ನು ತಮ್ಮ ಬರಹಗಳಲ್ಲಿ ಬಿಂಬಿಸದೆ ತಾತ್ತ್ವಿಕ ಚಿಂತನೆ ಕಡೆಗೆ, ಸಮಾಜ ಸುಧಾರಣೆಯ ಕಡೆಗೆ ಲಕ್ಷ್ಯ ವಹಿಸುವರು. ಹೀಗಾಗಿ ನಾವು ಐತಿಹಾಸಿಕ ವಿವರಗಳನ್ನು ಶರಣರ ಸಮಕಾಲೀನರು, ಶಿಷ್ಯರು ಬರೆದ ಬರಹಗಳಲ್ಲಿ ಮತ್ತು ಅವರನ್ನು ಕುರಿತು ರಚನೆಯಾದ ಕಾವ್ಯ-ಪುರಾಣಗಳಲ್ಲಿ ಹುಡುಕಿಕೊಳ್ಳ ಬೇಕಾಗುತ್ತದೆ.

ಈ ದೃಷ್ಟಿಯಿಂದ ನೋಡಿದಾಗ ಬಸವಣ್ಣನವರು ಸ್ವತಃ ಬರೆದ ವಚನಗಳಲ್ಲಿ ಅವರ ವ್ಯಕ್ತಿಗತ ಜೀವನದ ಐತಿಹಾಸಿಕ ವಿವರ, ಅದೂ ಪೂರ್ವಾಶ್ರಮ ಕುರಿತಾದ ವಿವರ ಸಿಗುವುದು ಅತ್ಯಲ್ಪ. ವಿವರಗಳನ್ನು ಒದಗಿಸುವ ಪ್ರಮುಖ ಆಕರಗಳೆಂದರೆ ಸಮಕಾಲೀನ ಶರಣರ ವಚನಗಳು, ನಂತರದ ಕವಿಗಳ ಕಾವ್ಯ - ಪುರಾಣಗಳು ಮತ್ತು ಕಾಲಜ್ಞಾನ ವಚನಗಳು. ಬಾಯಿಂದ ಬಾಯಿಗೆ ಹರಿದುಬಂದು, ತರಬೇತಿ ಇಲ್ಲದ ಅವಿದ್ಯಾವಂತ ಸಂದೇಶ ವಾಹಕರಿಂದ ಸಂಗ್ರಹಿಸಲ್ಪಟ್ಟು, ಕೇವಲ ಕೆಲವು ದಶಕಗಳಿಂದೀಚೆಗೆ ಮುದ್ರಣಗೊಂಡಿರುವುದರಿಂದ ಶುದ್ಧ ರೂಪದಲ್ಲಿ ದೊರೆಯುತ್ತಲಿಲ್ಲ. ಅವುಗಳಲ್ಲಿ ವಚನ ಸಾಹಿತ್ಯ ಸೊಗಡು ಕಣ್ಮರೆಯಾಗುತ್ತಿದೆಯಾದರೂ ಕಾಲಜ್ಞಾನ ವಚನಗಳು ಐತಿಹಾಸಿಕ ದಾಖಲೆಗಳು ಎಂಬುದನ್ನು ಮರೆಯಲಾಗದು. ಕೆಲವೊಂದು, ಆದಿ ಶರಣರು ನುಡಿದ ಭವಿಷ್ಯವಾಣಿ (Prophecy) ಯಂತೆ ಕಂಡರೂ ಬಹು ಪಾಲು ಕಾಲಜ್ಞಾನ ವಚನಗಳು ಬಸವಾದಿ ಪ್ರಮಥರ ಬದುಕು, ಶರಣರ ಧರ್ಮದ ಇತಿಹಾಸ , ನಡೆದ ಘಟನೆಗಳು, ವಚನ ವಾಙ್ಮಯ ರಕ್ಷಣೆ ಇವನ್ನೇ ಕುರಿತು ತಮ್ಮ ಧರ್ಮಾನುಯಾಯಿಗಳಿಗೆ ಹೇಳುತ್ತಾ ಹೋದಂತಿವೆ. ಒಂದು ಉದಾತ್ತ ಧ್ಯೇಯಕ್ಕಾಗಿ ಕಲ್ಯಾಣ ಕ್ರಾಂತಿಯಾಗಿ ಶರಣರು ಚೆದುರಿ ಚೆಲ್ಲಾಪಿಲ್ಲಿಯಾಗಿ ಹೋಗಿ, ಅವರು ಹೋಗಿ ನೆಲೆಸಿದಲ್ಲೆಲ್ಲ ಲಿಂಗವಂತ ಧರ್ಮ ಹಬ್ಬಿದಾಗ, **'ಸಾರುವ ಅಯ್ಯ'** ನವರು ಸಂಚರಿಸಿ, ಕಾಲಜ್ಞಾನ ವಚನಗಳ ಮೂಲಕ ಐತಿಹಾಸಿಕ ಸಂಗತಿಗಳು ತಿಳಿಸಿದಂತೆ ಕಾಣುತ್ತದೆ. ಈ ದಿಕ್ಕಿನಲ್ಲಿ ಕೊಡೈಕಲ್‌ನವರ ಕಾಲಜ್ಞಾನವು ಹೆಚ್ಚಿನ ನಿಖರತೆ, ಐತಿಹಾಸಿಕ ಮಹತ್ವ ಹೊಂದಿರುತ್ತವೆ. ಆದ್ದರಿಂದ ನಾನು ಪ್ರಸ್ತುತ ಬರಹವನ್ನು ಕಾಲಜ್ಞಾನ ವಚನಗಳನ್ನು ಹೆಚ್ಚು ಆಧರಿಸಿ ಬರೆಯುತ್ತಿದ್ದೇನೆ.

## ಗುರು ಬಸವಣ್ಣನವರ ಜೀವಿತದ ಕಾಲಾವಧಿ

ಗುರು ಬಸವಣ್ಣನವರು ಐಕ್ಯವಾದ ವರ್ಷ ನಳನಾಮ ಸಂವತ್ಸರ ಎಂಬುದರಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯವಿಲ್ಲ. ಬೇರೆ ಬೇರೆ ಸಂದೇಶವಾಹಕರು ಹೇಳಿರುವ ಕಾಲಜ್ಞಾನಗಳಲ್ಲಿ ಈ ವಿಚಾರದಲ್ಲಿ ಮಾತ್ರ ಒಮ್ಮತವಿದೆ. ಇದು ಕ್ರಿ.ಶ. 1196ಕ್ಕೆ ಕೂಡಿ ಬರುತ್ತದೆ. ಬಸವಣ್ಣನವರು ಕಲ್ಯಾಣದಿಂದ ನಿರ್ಗಮಿಸಿದುದು ರಾಕ್ಷಸನಾಮ ಸಂವತ್ಸರ ಫಾಲ್ಗುಣ ಮಾಸದ 12ನೆಯ ದಿವಸ. ಅಲ್ಲಿಂದ ಮುಂದೆ ಸಂಚರಿಸುತ್ತ ಬಂದು ಕೂಡಲ ಸಂಗಮದಲ್ಲಿ ಅನುಷ್ಠಾನ ಮಾಡುತ್ತಲಿದ್ದು, ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು ಸೂರ್ಯೋದಯವಾದ ಇಪ್ಪತ್ತೆಂಟು ಗಳಿಗೆಗೆ ಬಯಲಾಗಿದ್ದಾರೆ. ಕಾಲಜ್ಞಾನ ವಚನಗಳಲ್ಲಿ ಕೆಲವು ಕಡೆ ಪಾಡ್ಯ ಮತ್ತು ಕೆಲವು ಕಡೆ ಪಂಚಮಿ ಎಂದು ಬಂದಿರುವುದು. ಆದರೆ ಶ್ರಾವಣ ಮಾಸ, ಮಂಗಳವಾರ ಎಂಬ



ಬಗ್ಗೆ ನಿಖರತೆ ಒಮ್ಮತ ಇರುವ ಕಾರಣ ಶ್ರೀ ಡಾ|| ಬಾಡಾಲ ರಾಮಯ್ಯನವರು ಮಂಗಳವಾರದಂದು ಪಂಚಮಿಯಾಗಿತ್ತು ಎಂಬುದಾಗಿ ಖಚಿತಪಡಿಸಿದ್ದಾರೆ. ಹಾಗಾದರೆ ಜನ್ನಿಸಿದ್ದು ಯಾವ ವರ್ಷ ಎಂದು ಆಲೋಚಿಸಿದರೆ ಆನಂದನಾಮ ಸಂವತರ ಎನ್ನಿಸುತ್ತದೆ. ಅನೇಕರು ತಿಳಿದಂತೆ ಬಸವಣ್ಣನವರು ಜೀವಿಸಿದ್ದು ಕೇವಲ 36 ವರ್ಷಗಳಲ್ಲ, 63 ವರ್ಷಗಳು : * ಗುರುಬಸವಣ್ಣನವರ ಆತ್ಮ ಕಥೆಯಂತಿರುವ ವಚನಗಳಲ್ಲಿ ಹೀಗೆ ಬರುತ್ತದೆ.

> ಅಯ್ಯಾ ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರ್ಷ
> ಅಯ್ಯಾ, ಅನುಭವಕ್ಕೆ ಶಿವಸದನವಾದುದು ಇಪ್ಪತ್ತೇಳು ವರ್ಷ
> ಅಯ್ಯಾ, ಹಿಂದಿನಂತೆ ಅನುಭವ- ಭಕ್ತಿ ಇಲ್ಲ
> ಮೂರು ಮಾಸದೊಳಗಾಗಿ
>
> ಬ.ಷ.ವ.1166

ಈ ವಚನದ ಪ್ರಕಾರ ಶ್ರೀ ಗುರು ಬಸವಣ್ಣನವರು ಕಲ್ಯಾಣದಲ್ಲಿ ವಾಸವಾಗಿದ್ದುದು 36 ವರ್ಷ; ಆಗ ಅದು ಭಕ್ತಿಗೆ ಬೀಡಾಯಿತು. ಅವರು ಬಂದು ನೆಲೆಸಿದಾಗಿನಿಂದಲೂ ಧರ್ಮ ಪ್ರಚಾರ, ಅನುಭವ ಗೋಷ್ಠಿ, ಜನಜಾಗೃತಿ ಆರಂಭವಾಯಿತಾದರೂ, **'ಅನುಭವ ಮಂಟಪ'** ಎಂಬ ಸಂಸ್ಥೆಯು ಅಧಿಕೃತವಾಗಿ ಪ್ರಾರಂಭವಾದುದು ಬಸವಣ್ಣನವರು ಕಲ್ಯಾಣಕ್ಕೆ ಬಂದು ನೆಲೆಸಿದ 9ವರ್ಷಗಳ ನಂತರ. ಹೀಗಾಗಿ ಇದು ನಡೆದುದು 27 ವರ್ಷ. ಹೀಗೆ ಬಸವಣ್ಣನವರು ಕಲ್ಯಾಣದಲ್ಲಿ ಇದ್ದ ಕಾಲಾವಧಿಯೇ 36 ವರ್ಷ ಎಂದಾಗ, ಜೀವಿತದ ಅವಧಿ ಜಾಸ್ತಿ ಇರಲೇಬೇಕಲ್ಲವೆ?

ಕಾಲಜ್ಞಾನದ ವಚನಗಳ ಪ್ರಕಾರ ಗುರು ಬಸವಣ್ಣನವರು ಮಂಗಳವಾಡಿಯನ್ನು ಬಿಟ್ಟು ಕಲ್ಯಾಣವನ್ನು ಪ್ರವೇಶಿಸಿದ್ದು, ವಿಕ್ರಮನಾಮ ಸಂವತ್ಸರದ (1134) ಶ್ರಾವಣ ಶುದ್ಧ ಪಂಚಮಿ ಸೋಮವಾರ , ಕಲಿವರ್ಷ ನಾಲ್ಕು ಸಾವಿರದ ಒಂದುನೂರ ತೊಂಭತ್ತೆರಡರಲ್ಲಿ. ವಿಕ್ರಮನಾಮ ಸಂವತ್ಸರ (1134) ದಿಂದ ನಳನಾಮ ಸಂವತ್ಸರದ ವರೆಗಿನ ಸಮಯ ಮೂವತ್ತಾರು ವರ್ಷಗಳು ಎಂಬುದು ಗಮನಾರ್ಹ.

ಗುರುಬಸವಣ್ಣನವರು ಹಾಕಿಕೊಂಡ ಯೋಜನೆ, ಸಾಧಿಸಿದ ಸಿದ್ಧಿ ತಂದ ಸಮಾಜ ಪರಿವರ್ತನೆಗಳ ದೃಷ್ಟಿಯಿಂದ ನೋಡಿದರೆ 36 ವರ್ಷಗಳ ಜೀವಿತಾವಧಿಯಲ್ಲಿ ಇದೆಲ್ಲ ಸಾಧ್ಯವೇ ಇಲ್ಲ ಎನ್ನಿಸುತ್ತದೆ. ಶ್ರೀ ಆದಿ ಶಂಕರಾಚಾರ್ಯರು, ಶ್ರೀ ಸ್ವಾಮಿ ವಿವೇಕಾನಂದರು, ಶ್ರೀ ಏಸುಕ್ರಿಸ್ತರು ಮುಂತಾದವರ ಉದಾಹರಣೆ ನೀಡಿ

★ ಈ ಮೊದಲು ನಾನು ಶ್ರೀ ಬಸವಣ್ಣನವರು ಕ್ರಿ.ಶ 1168ರಲ್ಲಿ ಐಕ್ಯ ಎಂದು ಬರೆದಿದ್ದೆ. ರಾಕ್ಷಸನಾಮ ಸಂವತ್ಸರದ ನಂತರ ಬರುವ ನಳನಾಮ ಸಂವತ್ಸರಗಳು 1195-1196ರಲ್ಲಿ ಬರುವುದರಿಂದ ಈ ರೀತಿ ಲೆಕ್ಕಾಚಾರ ಮಾಡಬೇಕಾಗಿದೆ. ಭಾರತೀಯ ಕಾಲಮಾನದಲ್ಲಿ ವ್ಯತ್ಯಾಸವಿಲ್ಲ. ಭಾರತೀಯ ಕಾಲಮಾನದಿಂದ ಕ್ರಿಸ್ತಶಕಕ್ಕೆ ಪರಿವರ್ತಿಸುವಾಗ ಲೆಕ್ಕಾಚಾರ ತಪ್ಪಾಗಿದ್ದಿತು. ಖಚಿತವಾಗಿ ಹೇಳಬೇಕಾದರೆ 62 ವರ್ಷ, 3 ತಿಂಗಳು, 2 ದಿವಸ.

ಅವರೆಲ್ಲ ಸ್ವಲ್ಪ ಸಮಯದಲ್ಲೇ ಆಗಾಧವಾದುದನ್ನು ಮಾಡಲಿಲ್ಲವೇ ಎಂದು ಕೆಲವರು ವಾದಿಸುವರು. ಒಂದು ಸಿದ್ಧಾಂತದ ಪ್ರತಿಪಾದನೆಯನ್ನಾಗಲೀ, ಕಾವ್ಯ ರಚನೆಯನ್ನಾಗಲೀ ಮಾಡುವುದು ಬೇರೆ, ಸಮಾಜದಲ್ಲಿ ಮೂಲಭೂತ ಪರಿವರ್ತನೆ ತರುವುದು ಬೇರೆ. ಅದೂ ಮಡುಗಟ್ಟಿ ಮಲೆತು ಹೋಗಿದ್ದ ಸಮಾಜದಲ್ಲಿ ನೂತನ ಚೈತನ್ಯ ಸಂಚಾರ ಮಾಡಿ, ಆಮೂಲಾಗ್ರ ಬದಲಾವಣೆ ತರುವುದು ಜಾದೂ ಕಟ್ಟಿಗೆಯಿಂದ ಆಗುವಂತಹುದಲ್ಲ ತಾನೆ ? ಬೋಧಕ ಜಂಗಮರು ಶಾರೀರಿಕವಾಗಿಯೇ ಸಂಚರಿಸಿ, ಸಂದೇಶಗಳನ್ನು ಪ್ರತ್ಯಕ್ಷವಾಗಿ ಕೊಂಡೊಯ್ದು ಜನರಿಗೆ ಮುಟ್ಟಿಸಲು ಅನಿವಾರ್ಯತೆ ಇದ್ದ ಕಾಲವದು, ಇಂದಿನಂತೆ ತ್ವರಿತವಾಗಿ ಜನರಿಗೆ ಸಂದೇಶ ತಲುಪಿಸಲು ಬಾನುಲಿ ಕೇಂದ್ರಗಳಾಗಲೀ, ವೃತ್ತಪತ್ರಿಕೆಗಳಾಗಲೀ ತ್ವರಿತ ಸಾರಿಗೆ ವ್ಯವಸ್ಥೆಯಾಗಲೀ ಇಲ್ಲದ ಕಾಲವಷ್ಟೆ. ಈ ಎಲ್ಲ ದೃಷ್ಟಿಯಿಂದ ಗುರು ಬಸವಣ್ಣನವರ ಜೀವಿತದ ಅವಧಿ ಸುಮಾರು 63 ವರ್ಷ ಎಂದು ಕೊಂಡರೆ -ಆಗ ಅವರ ಹುಟ್ಟು ಆನಂದ ನಾಮ ಸಂವತ್ಸರದಲ್ಲಿ ಎಂದು ಆಗುತ್ತದೆ. ಇದು ಕ್ರಿ.ಶ. 1134ಕ್ಕೆ ಬರುತ್ತದೆ. ಡಾ|| ಆರ್. ಸಿ. ಹಿರೇಮಠರು Commermoration Volume of Basaveswara ದಲ್ಲಿ ಕ್ರಿ. ಶ. 1131 ಎಂದು ಅಂದಾಜು ಮಾಡಿದ್ದಾರೆ. ಅದು ವಿರೋಧಿಕೃತು ಸಂವತ್ಸರವಾಗುತ್ತದೆ. ಈ ಹೆಸರು ಎಲ್ಲಿಯೂ ಕಾಣಬರುತ್ತಿಲ್ಲ. ಆದ್ದರಿಂದ ಆನಂದ ನಾಮ ಸಂವತ್ಸರದ ಹೆಸರೇ ಪ್ರಸ್ತಾಪವಾಗುವುದರಿಂದ ನಾವು ಅದನ್ನೇ ಜನನ ವರ್ಷವೆಂದು ತಿಳಿಯೋಣ. ಆನಂದ ನಾಮ ಸಂವತ್ಸರ ಕ್ರಿ.ಶ. 1134 ಆಗುತ್ತದೆ.

## ಜನ್ಮವು ರೋಹಿಣಿ ನಕ್ಷತ್ರದಲ್ಲಿ

ಹುಬ್ಬಳ್ಳಿಯ ಖ್ಯಾತ ಜ್ಯೋತಿಷ್ಯ ವಿದ್ವಾಂಸರಾದ ಶ್ರೀ ವೇ.ಪಂ. ಚನ್ನವೀರ ಶಾಸ್ತ್ರಿಗಳು ಸಾಲೀಮಠ, ವಿದ್ಯಾಸಾಗರ ಪಂಚಾಂಗಕರ್ತರು ಈ ಬಗ್ಗೆ **'ಬಸವ ಜಯಂತಿಯ ನಿರ್ಣಯ'** ಎಂಬ ಶಾಸ್ತ್ರೋಕ್ತವಾದ ಪುಸ್ತಕವನ್ನು ರಚಿಸಿದ್ದಾರೆ. ಹಸ್ತಪ್ರತಿಯ ರೂಪದಲ್ಲಿ ಇರುವ ಅದನ್ನು ಅಧ್ಯಯನ ಮಾಡಿದಾಗ ಅವರ ವಾದ ತಾರ್ಕಿಕವೂ ಸುಸಂಬದ್ಧವೂ ಎನ್ನಿಸದೆ ಇರದು. ರೋಹಿಣಿ ನಕ್ಷತ್ರವು ಸಾಮಾನ್ಯವಾಗಿ ದ್ವಿತೀಯ, ತೃತೀಯ, ಚತುರ್ಥಿ ಈ ಮೂರು ದಿವಸಗಳಲ್ಲಿ ಒಂದು ದಿವಸ ಬರುತ್ತದೆ. ಬಸವಣ್ಣನವರು ಜನ್ಮಿಸಿದ ದಿವಸ ರೋಹಿಣಿ ನಕ್ಷತ್ರವು ಅಕ್ಷಯ ತೃತೀಯಾದಂದು ಬಂದಿರುವ ಸಂಭವವಿದೆಯಾದರೂ ''ಭಾರತೀಯ ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ನಕ್ಷತ್ರವು ಮುಖ್ಯವಾದುದರಿಂದ, ನಾವು ರೋಹಿಣಿ ನಕ್ಷತ್ರವು ಬಂದ ದಿನದಂದು ಬಸವ ಜಯಂತಿಯನ್ನು ಆಚರಿಸುವುದೇ ಸೂಕ್ತ'' ಎಂದು ಶ್ರೀ ಸಾಲೀಮಠ ಚನ್ನವೀರ ಶಾಸ್ತ್ರಿಗಳು ಅಭಿಪ್ರಾಯಪಡುತ್ತಾರೆ. ಅಕ್ಷಯ ತೃತೀಯದಂದು ಆಚರಿಸುವ ಬದಲಿಗೆ



ರೋಹಿಣಿ ನಕ್ಷತ್ರವು ಒದಗಿ ಬರುವ ಬಿದಿಗೆ, ತದಿಗೆ, ಚೌತಿ. ಈ ಯಾವುದೇ ದಿನದಂದು ಆಯಾ ವರ್ಷದ ಲೆಕ್ಕಾಚಾರದಂತೆ ಮಾಡಬೇಕೆಂಬ ಶ್ರೀ ಶಾಸ್ತ್ರಿಗಳ ಅಭಿಪ್ರಾಯ ಗಮನಾರ್ಹವಾಗಿದೆ.

## ಜನ್ಮವು ಅರ್ಧೋದಯದಲ್ಲಲ್ಲ

ಪಾಲ್ಕುರಿಕೆ ಭೀಮ ಕವಿಗಳ ಬಸವ ಪುರಾಣಗಳನ್ನು ಆಧಾರವಾಗಿರಿಸಿಕೊಂಡು 'ಶಿಶೋರರ್ಧೋದಯೇ ಜಾತೇ' ಎಂಬ ಕವಿಗಳ ಮಾತಿನ ಆಧಾರದ ಮೇಲೆ ಕೆಲವರು ಶ್ರೀ ಬಸವಣ್ಣನವರು ಅರ್ಧೋದಯ ಮುಹೂರ್ತದಲ್ಲಿ ಜನಿಸಿದರು ಎಂಬುದನ್ನು ಶ್ರೀ ಚನ್ನವೀರ ಶಾಸ್ತ್ರಿಗಳು ಸಶಾಸ್ತ್ರೀಯವಾಗಿ ನಿರಾಕರಿಸುತ್ತಾರೆ. ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಅರ್ಧೋದಯಕ್ಕೆ ಈ ರೀತಿಯಾದ ವಿವರಣೆ ಇದೆ ಎಂಬುದವರ ಪ್ರತಿ ಪಾದನೆ.

ಮಾಘ ಮಾಸಿರವಾದರ್ಶೇ ವ್ಯತಿಪಾತೇ ಶ್ರವಾನ್ವಿತೇ
ಅರ್ಧೋದಯಾಭಿದೋ ಯೋಗಃ ಸೂರ್ಯಪರ್ವ ತತಾಧಿಕಾಃ
ಆಯ ಮುಕ್ತೋ ದಿವಾಯೋಗಃ ಕಿಂಚಿನ್ಯೂನೋ ಮಹೋದಯಃ

ಮಾಘ ಮಾಸದಲ್ಲಿ ಅಮವಾಸ್ಯೆ ಬಂದಾಗ, ಅಂದು ರವಿವಾರ ಇರಬೇಕು. ಆ ದಿನ ಸೂರ್ಯೋದಯವಾಗುವ ಕಾಲಕ್ಕೆ ವ್ಯತಿಪಾತಯೋಗ ಶ್ರವಣ ನಕ್ಷತ್ರ ಇರಬೇಕು. ಇದಕ್ಕೆ ಅರ್ಧೋದಯ ಮುಹೂರ್ತವೆಂದು ಹೆಸರು. ಶ್ರೀ ಶಾಸ್ತ್ರಿಗಳವರು ಬಸವಣ್ಣನವರು ಅರ್ಧೋದಯದಲ್ಲಿ ಜನಿಸಿಲ್ಲ ಎಂಬುದಕ್ಕೆ ಹೋರಾ ಶಾಸ್ತ್ರದ ಬಲವಾದ ಕಾರಣವೊಂದನ್ನು ಕೊಡುತ್ತಾರೆ. ಈ ಮುಹೂರ್ತದಲ್ಲಿ ಜನಿಸಿದವರು ಮಹಾತ್ಮರೂ ಆಗುವುದಿಲ್ಲ; ಮತ್ತು ರಾಜಯೋಗ ವಿರುವುದಿಲ್ಲವಾದ್ದರಿಂದ ರಾಜರಾಗಲೀ, ಮಂತ್ರಿಯಾಗಲೀ ಆಗುವುದಿಲ್ಲ ಎಂಬುದು ಅದು. ಆದರೆ ಬಸವಣ್ಣನವರಲ್ಲಿ ರಾಜಯೋಗವಿದ್ದ ಕಾರಣವೇ ಅವರು ಮಹಾಮಂತ್ರಿಯಾದರು ಎಂಬುದಾಗಿ,ಪ್ರತಿಪಾದಿಸುತ್ತಾರೆ. ಸಾಮಾನ್ಯವಾಗಿ ಅರ್ಧೋದಯದಲ್ಲಿ ಶಿಶುವು ಹುಟ್ಟಿತು ಎಂಬ ಪಾಲ್ಕುರಿಕೆ ಸೋಮನಾಥ, ಭೀಮ ಕವಿಗಳಿಗೆ ಜ್ಯೋತಿಷ್ಯದಲ್ಲಿ ಪ್ರಾವೀಣ್ಯತೆ ಇಲ್ಲದ ಕಾರಣ, ಅರ್ಧೋದಯವೆಂದು ಊಹಾತ್ಮಕವಾಗಿ ಹೇಳಿರಬಹುದು ಎಂದು ಅಭಿಪ್ರಾಯಪಡುತ್ತಾರೆ.

ಸಂಸ್ಕೃತದಲ್ಲಿ ಬರೆಯಲ್ಪಟ್ಟ ಶಂಕರಾರಾಧ್ಯ (1320) ವಿರಚಿತ ಬಸವ ಪುರಾಣವನ್ನು ಎತ್ತಿ ಹಿಡಿಯುವ ಶ್ರೀ ಚನ್ನವೀರ ಶಾಸ್ತ್ರಿಗಳು ಹೀಗೆ ಅಭಿಪ್ರಾಯ ಪಡುತ್ತಾರೆ. 4ನೇ ಅಧ್ಯಾಯ 34-35 ನೇ ಶ್ಲೋಕದಲ್ಲಿ ಹೀಗೆ ಹೇಳಲಾಗಿದೆ.

ಮೀನಸ್ಥಿತೇ ಭೃಗೋಃ ಪುತ್ರೇ ಮೇಷಸ್ಥೇಚ ದೀವಾಕರೇ
ತುಲಾಸ್ಥಿತೇ ಚ ತತ್ಪುತ್ರೇ ಕರ್ಕಟಸ್ಥೇ ಬೃಹಸ್ಪತೌ (1)
ಶಶಾಂಕೇ ರೋಹಿಣಿ ಸಂಸ್ಥೇ ಮಕರಸ್ಥೇ ಚ ಭೂಸುತೇ
ಶಿಶೋರರ್ಧೋದಯೇ ಜಾತೇ ಲಗ್ನ ಕರ್ಕಟ ಸಂಜ್ಞಕೇ (2)

ಜನ್ಮ ಲಗ್ನ ಕುಂಡಲಿಯಲ್ಲಿ ಮೀನದೊಳಗೆ (ಭೃಗೋಃ) ಶುಕ್ರನಿರುತ್ತಾನೆ. ಕರ್ಕದಲ್ಲಿ (ಬೃಹಸ್ಪತೌ) ಗುರು ಇರುತ್ತಾನೆ. ''ಶಶಾಂಕೇ ರೋಹಿಣೆ ಸಂಸ್ಥೆ'' - ಚಂದ್ರನು ರೋಹಿಣಿ ನಕ್ಷತ್ರದಲ್ಲಿದ್ದಾನೆ. ಮಕರದಲ್ಲಿ (ಭೂಸುತೇ) ಮಂಗಳನಿರುತ್ತಾನೆ. ''ಲಗ್ನ ಕರ್ಕಟ ಸಂಜ್ಞಕೇ'' ಅಂದರೆ ಜನ್ಮ ಲಗ್ನವು ಕರ್ಕಟ (ಕರ್ಕ) ವಾಗಿದೆ.

## ಬಸವಣ್ಣನವರ ಜನ್ಮ ಕುಂಡಲಿ

| | | | |
|---|---|---|---|
| 12 ಶು | 1 ಬುಧ ರವಿ | 2 ಚಂದ್ರ | 3 ರಾಹು |
| 11 | | | 4 ಲಗ್ನ ಗುರು |
| 10 ಕುಜ | | | 5 |
| 9 ಕೇ | 8 | 7 ಶನಿ ವ 5 | 6 |

ಅರ್ಧೋದಯದ ಅರ್ಥವನ್ನು ಶ್ರೀ ಸಾಲೀಮಠರು ಹೀಗೆ ಮಾಡುತ್ತಾರೆ; ಕರ್ಕಟ ಲಗ್ನದಲ್ಲಿ ಒಟ್ಟು 30 ಅಂಶಗಳು. 15 ಅಂಶಗಳು ಕಳೆದು ನಂತರ 5ನೆಯ ನವಾಂಶದಲ್ಲಿ (ವೃಶ್ಚಿಕಾಂಶದಲ್ಲಿ) ಶಿಶುವು ಜನಿಸಿತು. ಉತ್ತರಾರ್ಧದಲ್ಲಿ ಜನಿಸಿದರೆ ವ್ಯಕ್ತಿಯು ನಿರೋಗಿಯೂ, ಮಹಾಪುರುಷನು, ತೇಜಸ್ವಿಯೂ, ಪೂರ್ವಾರ್ಧದಲ್ಲಿ ಜನಿಸಿದರೆ ವಿಷಯ ಲಂಪಟನೂ, ರೋಗಗ್ರಸ್ತ ಶರೀರಿಯೂ ಆಗುತ್ತಾನೆ ಎಂಬ ಹೋರಾ ಶಾಸ್ತ್ರದ ಪ್ರಕಾರವೂ, ಕರ್ಕಟ ಲಗ್ನದ ಉತ್ತರಾರ್ಧದಲ್ಲೇ ಬಸವಣ್ಣನವರು ಜನಿಸಿದ್ದಾರೆ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.

## ಬಸವ ಜಯಂತಿಯ ಆಚರಣೆ ಪ್ರಾರಂಭ

ಮುರುಘಾಮಠದ ಪೂಜ್ಯ ಲಿಂ|| ಶ್ರೀಮೃತ್ಯುಂಜಯ ಸ್ವಾಮಿಗಳವರು ಲಿಂ|| ಶರಣ ಹರ್ಡೇಕರ್ ಮಂಜಪ್ಪನವರು, ಪ್ರೊ. ಲಿಂ|| ಬಸವನಾಳ ಶಿವಲಿಂಗಪ್ಪನವರು ಮುಂತಾದ ಮಹನೀಯರು, ಲಿಂಗಾಯತ ಸಮಾಜದ ಜಾಗೃತಿ, ಸಂಘಟನೆ, ಸಂಸ್ಕಾರ ದೃಷ್ಟಿಯಿಂದ ಗುರು ಬಸವಣ್ಣನವರ ಜಯಂತಿಯನ್ನು ಆಚರಿಸಬೇಕೆಂಬ ನಿರ್ಣಯವನ್ನು ಕೈಗೊಂಡು,



1911ರಲ್ಲಿ ಪ್ರಪ್ರಥಮವಾಗಿ ಆಚರಿಸಿದರು. ಜನನ ಕಾಲದ ವಿಷಯವಾಗಿ ಇನ್ನೂ ಭಿನ್ನಾಭಿಪ್ರಾಯವಿರುವುದರಿಂದ, ಈ ಬಗ್ಗೆ ಚರ್ಚಿಸುತ್ತ ಸಮಯ ಹರಣ ಮಾಡದೆ ಸಂಸ್ಕೃತ ಬಸವ ಪುರಾಣದ ಉಲ್ಲೇಖದ ಆಧಾರದ ಮೇಲೆ, ವೈಶಾಖ ಮಾಸದ ಅಕ್ಷಯ ತೃತೀಯಾದಂದು ಅಂದರೆ ಸಾಡೇ ತೀನ್ ಮೂಹೂರ್ತದಲ್ಲಿಯೇ ಆಚರಿಸಭೇಕೆಂದು ನಿರ್ಧಾರ ತಳೆದರು.

ಆದ್ದರಿಂದ, ಬಹಳ ವ್ಯತ್ಯಾಸವನ್ನೇನೂ ಉಂಟು ಮಾಡದ, ರೋಹಿಣಿ ನಕ್ಷತ್ರವೆಂದು ಎಲ್ಲ ಮೂಲಗಳಿಂದಲೂ ತಿಳಿದು ಬರುವ ದಿನದಂದು ಬಸವ ಜಯಂತಿಯನ್ನು ಆಚರಿಸಬೇಕು ಎಂಬುದು ಸೂಕ್ತ ವಿಚಾರ. ಬಿದಿಗೆ, ತದಿಗೆ, ಚೌತಿ ಈ ಮೂರರಲ್ಲಿ ಯಾವುದೇ ದಿನ ರೋಹಿಣಿ ನಕ್ಷತ್ರ ಬಂದರೂ, ಬಸವಣ್ಣನವರು ಅವತರಿಸಿದ ದಿನವೆಂದು ಆಚರಿಸುವುದು ಸಶಾಸ್ತ್ರೀಯವಾಗುವುದು.

ಇನ್ನೊಂದು ಆಶ್ಚರ್ಯಕರ ಸಂಗತಿ ಎಂದರೆ ಕರ್ನಾಟಕದ ಲಿಂಗಾಯತರ ಸಂಪರ್ಕ ಅಷ್ಟಾಗಿ ಇರದಿದ್ದ ತಮಿಳುನಾಡಿನ ನೀಲಗಿರಿ ಗುಡ್ಡಗಳಲ್ಲಿರುವ ಬಡಗ ಲಿಂಗಾಯತರು ಸಾಂಪ್ರದಾಯಿಕವಾಗಿ ಇದೇ ಅಕ್ಷರತೃತೀಯಾದಂದೇ ಎಂದಿನಿಂದಲೂ ಬಸವಜಯಂತಿಯನ್ನು ಆಚರಿಸಿಕೊಂಡು ಬರುತ್ತಿದ್ದಾರೆ ಎಂಬುದು ನಮಗೆ ಬಹುದೊಡ್ಡ ಆಧಾರವಾಗುತ್ತದೆ.

ಶ್ರೀ ಗುರು ಬಸವಣ್ಣನವರು ಜನಿಸಿದ ವರ್ಷ ಕ್ರಿ. ಶ. 1106 ಎಂದು ಮಿ||ಈ. ಥರಸ್ಟನ್, ಲಿಂ|| ಬಸವನಾಳರು, ಆರ್.ಸಿ. ಕಾರ್ ಮುಂತಾದವರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಸಿದ್ಧ ಸಂಶೋಧಕರು, ಬರಹಗಾರರೂ ಆದ ಡಾ. ಹಿರೇಮಲ್ಲೂರ ಈಶ್ವರನ್‌ರವರು, ಹುಟ್ಟು 1106ರಲ್ಲಿ, ಬಸವಣ್ಣನವರು ಜೀವಿಸಿದ್ದು ಸುಮಾರು 63 ವರ್ಷ ಎಂದೇ ಅಭಿಪ್ರಾಯ ಪಡುತ್ತಾರೆ. ವಿವಿಧ ಮೂಲಗಳಿಂದ ಸಿಗುವ ದಾಖಲೆಗಳು ಮತ್ತು ಗುರು ಬಸವ ತಂದೆಯವರು ಸಾಧಿಸಿದ ಪವಾಡ ಸದೃಶ ಕಾರ್ಯಗಳನ್ನು ನೋಡಿದ್ದೇ ಆದರೆ ಅವರು ಸುಮಾರು 62-63 ವರ್ಷಕಾಲ ಬದುಕಿರುವುದೇ ಸತ್ಯ ಎಂಬುದು ಖಚಿತವಾಗುತ್ತದೆ.

ಈ ಮೇಲಿನ ವಿದ್ವಾಂಸರ ಮತ್ತು ಇನ್ನೂ ಇತರ ಕೆಲವರು ಅಭಿಪ್ರಾಯ ಪಡುವಂತೆ ಜೀವಿತದ ಅವಧಿ 62-63 ವರ್ಷ ಎಂಬುದು ಪೂರ್ಣ ಸತ್ಯವಾದರೂ ಜನನ 1106 ರಲ್ಲಿ ಲಿಂಗೈಕ್ಯ 1168 ರಲ್ಲಿ ಎಂದು ಒಪ್ಪಲು ಸಾಧ್ಯವಿಲ್ಲ. ಇಲ್ಲಿಯವರೆಗೆ ಹಾಗೆಯೇ ಪ್ರತಿಪಾದಿಸಿದ ನಾನು ನಿರ್ಧಾರಕ್ಕೆ ಬಂದು ಇದನ್ನು ಘೋಷಿಸುತ್ತಿದ್ದೇನೆ. ಭಾರತೀಯ ಕಾಲಮಾನ ಮತ್ತು ಪಾಶ್ಚಿಮಾತ್ಯ ಕಾಲಮಾನಗಳನ್ನು ತಾಳೆ ಹಾಕಿ ನೋಡುವಾಗ ಕೆಲವು ತಪ್ಪು ಘಟಿಸಿವೆ. ಕ್ರಿ. ಶ. 1106ರಲ್ಲಿ ವ್ಯಯನಾಮ ಸಂತ್ಸರ ಬಂದರೆ, ಕ್ರಿ.ಶ. 1168ರಲ್ಲಿ ಸರ್ವಜಿತ, ಸರ್ವಧಾರಿ ಸಂವತ್ಸರಗಳು ಬರುತ್ತವೆ.

ಕಾಲಜ್ಞಾನ ವಚನಗಳಲ್ಲಿ ನಮಗೆ ಅತ್ಯಂತ ಖಚಿತವಾಗಿ ಕೆಲವು ಸಂವತ್ಸರಗಳ ಹೆಸರು ಸಿಗುವುದರಿಂದ ಅವುಗಳನ್ನು ಬಲವಾಗಿ ಹಿಡಿದುಕೊಂಡು ನಾವು ಕಾಲ ನಿರ್ಣಯ ಮಾಡಬಹುದು.

1. ಧರ್ಮಗುರು ಬಸವಣ್ಣನವರು ಕಲ್ಯಾಣದಿಂದ ಹೊರಟುದು ರಾಕ್ಷಸನಾಮ ಸಂವತ್ಸರ (ಕ್ರಿ.ಶ. 1196) ದ ಫಾಲ್ಗುಣ ಮಾಸದ ದ್ವಾದಶಿಯಂದು.
2. ಲಿಂಗೈಕ್ಯರಾದುದು ನಳನಾಮ ಸಂವತ್ಸರ (ಕ್ರಿ.ಶ.1196) ದ ಶ್ರಾವಣ ಶುದ್ಧ ಪಂಚಮಿಯಂದು.
3. ಅವರು ಮಂಗಳವಾಡದಿಂದ ಕಲ್ಯಾಣಕ್ಕೆ ತಮ್ಮ ವಾಸ್ತವ್ಯವನ್ನು ಸ್ಥಳಾಂತರಿಸಿದ್ದು ವಿಕ್ರಮನಾಮ ಸಂವತ್ಸರ (ಕ್ರಿ.ಶ, 1160) ಇದಂತೂ ಅದೆಷ್ಟು ಸ್ಪಷ್ಟವಾಗಿ ಹೇಳಲ್ಪಟ್ಟಿದೆ ಎಂದರೆ ನಗರ ಪ್ರವೇಶ ಮಾಡಿದ ಸಮಯ ಸಹ ಉಲ್ಲೇಖಿತವಾಗಿದೆ.

ಮಂಗಳವಾಡದಿಂದ ಕಲ್ಯಾಣಕ್ಕೆ ವಿಕ್ರಮನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಸೋಮವಾರ, ಬೆಳಗಿನ ಹೊತ್ತಿಗೆ ಕಲ್ಯಾಣವನ್ನು ಪ್ರವೇಶಿಸಿದರು.

ವಿಕ್ರಮನಾಮ ಸಂವತ್ಸರದಿಂದ ರಾಕ್ಷಸ / ನಳಕ್ಕೆ ಸರಿಯಾಗಿ 36 ವರ್ಷ. ''ಅಯ್ಯಾ ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ'' ಎಂಬುದಕ್ಕೂ ಈ ಲೆಕ್ಕಾಚಾರಕ್ಕೂ ಸಂಪೂರ್ಣ ಹೊಂದಿಕೆಯಾಗುತ್ತದೆ ಎನ್ನುವುದು ತೀರಾ ಗಮನಾರ್ಹ ಮತ್ತು ಆನಂದಕಾರಕ. ಅದೇ ರೀತಿ ಅತ್ಯಂತ ಖಚಿತವಾಗಿ ಬರುವ ಇನ್ನೊಂದು ಉಲ್ಲೇಖ ನಂದನನಾಮ ಸಂವತ್ಸರದಲ್ಲಿ (ಕ್ರಿ.ಶ. 1172) ಚಿನ್ಮಯ ಜ್ಞಾನಿ ಚನ್ನ ಬಸವಣ್ಣನವರು ಹುಟ್ಟಿದರು ಎಂಬುದು. ಅವರ ಜನ್ಮ ನಂದನನಾಮ ಸಂವತ್ಸರದಲ್ಲಿ, ಲಿಂಗೈಕ್ಯ ನಳನಾಮ ಸಂವತ್ಸರದಲ್ಲಿ. ಅವರು ಬದುಕಿದ್ದು ಕೇವಲ 24 ವರ್ಷಕಾಲ ಮಾತ್ರ *.

ಈ ಮಧ್ಯೆ ನಮ್ಮನ್ನು ಹರ್ಷಾತಿರೇಕದಿಂದ ಮುದಗೊಳಿಸುವ ಇನ್ನೊಂದು ಮಾಹಿತಿ ಎಂದರೆ ಬಿಜ್ಜಳ ಮಹಾರಾಜನ ಅಧಿಕಾರ ಗ್ರಹಣ ಪ್ರಸಂಗ. ಚಾಲುಕ್ಯ ದೊರೆ ಜಗದೇಕ ಮಲ್ಲನು ತೀರಿಕೊಂಡದ್ದು ಕ್ರಿ. ಶ. 1150 ರಲ್ಲಿ, ಆಗ ತೈಲಪನು ಅಧಿಕಾರಕ್ಕೆ ಬಂದನು. ಅವನು ಅನನುಭವಿ, ಅಸಮರ್ಥ. ಹೀಗಾಗಿ ಬಿಜ್ಜಳನು ಹಿತೈಷಿಯಂತೆ ವರ್ತಿಸುತ್ತ ತೈಲಪನ ರಾಜ್ಯ ಸೂತ್ರಗಳನ್ನೂ ಒಂದೊಂದಾಗಿ ಎಳೆದುಕೊಳ್ಳತೊಡಗಿದನು. ಬಿಜ್ಜಳನು ದಿನದಿಂದ ದಿನಕ್ಕೆ ಬಲಿಷ್ಠನಾಗುತ್ತ ಬಂದನು.

* ಡಾ. ಆರ್. ಸಿ. ಹಿರೇಮಠರು ಚನ್ನಬಸವಣ್ಣನವರ ಜನನವು ಕ್ರಿ. ಶ. 1143 ರಲ್ಲಿ ಲಿಂಗೈಕ್ಯವು 1167 ರಲ್ಲಿ ಎಂದು ಅಭಿಪ್ರಾಯ ಪಡುತ್ತಾರೆ. ಇದು ಸರಿಯಲ್ಲ. ಭಾರತೀಯ ಸಂವತ್ಸರಗಳ ಪ್ರಕಾರ ಜನನವು ನಂದನನಾಮ ಸಂವತ್ಸರದಲ್ಲಿ, ಲಿಂಗೈಕ್ಯವು ನಳನಾಮ ಸಂವತ್ಸರದಲ್ಲಿ. ಒಟ್ಟು ಆಯುಷ್ಯ 24 ವರ್ಷ: ಕ್ರಿ. ಶ. 1172 ರಿಂದ 1196 ರ ವರೆಗೆ.



ಶ್ರೀ ಗುರು ಬಸವಣ್ಣನವರು, ಬಿಜ್ಜಳನು ಮಾಂಡಲಿಕನಾಗಿ ಇನ್ನೂ ಮಂಗಳ ವಾಡಿಯಲ್ಲಿ ಇರುತ್ತ ಬಲಯುತನಾಗುವ ವೇಳೆಯಲ್ಲೇ ಕೂಡಲ ಸಂಗಮ ದಿಂದ ಕ್ರಿ. ಶ. 1153 ರಲ್ಲಿ ನಿರ್ಗಮಿಸಿ, ಮಂಗಳವಾಡಕ್ಕೆ ಆಗಮಿಸಿದರು.*

ಚಾಲುಕ್ಯ ತೈಲಪನು ಕಾಕತೀಯ ಪ್ರೋಲನಿಗೆ ಸೋತು (ಕ್ರಿ. ಶ. 1155) ತನ್ನ ಹೇಡಿತನ ತೋರಿಸಿದುದು ಜನತೆಯ ಕಣ್ಣಿನಲ್ಲಿ ದೊಡ್ಡವನಾಗಿ ಕಾಣಿಸಿಕೊಳ್ಳಲು ಬಿಜ್ಜಳನಿಗೆ ಇನ್ನೂ ಅನುಕೂಲವಾಯಿತು. ಸೋಲಿನ ಅಪಮಾನದಿಂದ ತೈಲಪನು ರಾಜ್ಯದ ಬಗ್ಗೆ ತೀರಾ ಉದಾಸೀನನಾದನು. ಈಗ ಸಮಯ ಸಾಧಿಸಿ ಶಾಸನಗಳಲ್ಲಿ ''ಸಕಲದೇಶಂಗಳಂ ಆಳುತ್ತಮಿರೆ'' (ಕ್ರಿ. ಶ. 1156) ಎಂದೂ, ತನ್ನ ಆಳ್ವಿಕೆಯ ಎರಡನೆಯ ವರ್ಷ (ಕ್ರಿ. ಶ. 1157) ''ಮಹಾರಾಜಾಧಿರಾಜ'' ಎಂದೂ, ''ಧರೆಯಂ ಸಾಧಿಸಿದಂ ತೆಂಕಬ್ಧಿಯೆ ಬಡಗ ಸೀಮೆ ಚಾಳುಕ್ಯ ಕಟಕವೆನೆ'' (ಕ್ರಿ. ಶ. 1159) ಎಂದು ಬರೆಸಿಕೊಳ್ಳುತ್ತ ಬಂದು- ಕ್ರಿ. ಶ. 1162 ರ ಸುಮಾರಿಗೆ ಮಂಗಳವಾಡದ ಮಾಂಡಲಿಕತ್ವ ಬಿಟ್ಟು ಬಹಿರಂಗವಾಗಿ ಚಕ್ರವರ್ತಿಯಾದನು. ರಾಜ್ಯಾಪಹರಣ ಎನ್ನಿಸದ ರೀತಿಯಲ್ಲಿ ಕ್ರಮೇಣ ಸಾಮ್ರಾಜ್ಯವನ್ನು ಸಾಧಿಸಿದನು. ಮಂತ್ರಿಯಾಗಿರಬಹುದಾದ ಬಲದೇವ ಮಡಿಯಲು ಬಸವಣ್ಣನವರೇ ಆ ಸ್ಥಾನಕ್ಕೆ ಯೋಗ್ಯರೆಂದು ಬಿಜ್ಜಳ ಭಾವಿಸಿದನು.** ಬಿಜ್ಜಳನು ಚಕ್ರವರ್ತಿಯಾಗಲು ಬಸವಣ್ಣನವರು ಕ್ರಿ. ಶ. 1162 ರಲ್ಲಿ ಪ್ರಧಾನಿಯಾದರು.***

ಕಾಲಜ್ಞಾನದ ಸ್ಪಷ್ಟೋಕ್ತಿಯಂತೆ ಬಸವಣ್ಣನವರು ಕಲ್ಯಾಣವನ್ನು ಪ್ರವೇಶಿಸಿದುದು ವಿಕ್ರಮನಾಮ ಸಂವತ್ಸರದಲ್ಲಿ (1160) ಕೂಡಲ ಸಂಗಮವನ್ನು 1153 ರಲ್ಲಿ ಬಿಟ್ಟು ಬಂದು 7 ವರ್ಷಕಾಲ ಮಂಗಳವಾಡಿಯಲ್ಲಿದ್ದು 1160 ರಲ್ಲಿ ಕಲ್ಯಾಣಕ್ಕೆ ವಾಸ್ತವ್ಯವನ್ನು ಸ್ಥಳಾಂತರಿಸಿಕೊಂಡು ಕ್ರಿ. ಶ. 1196 ರ ವರೆಗೆ ಕಲ್ಯಾಣದಲ್ಲಿದ್ದರು. ಇದು ಅವರ ವಚನಗಳಲ್ಲಿ ಹೇಳಲ್ಪಡುವ **ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ** ಎಂಬುದನ್ನು ಸಂಪೂರ್ಣವಾಗಿ ಪುಷ್ಟೀಕರಿಸುತ್ತದೆ. ಮುಂದೆ ಎರಡೇ ವರ್ಷಗಳಲ್ಲಿ ಬಿಜ್ಜಳನು ಸ್ವತಂತ್ರ ಸಾರ್ವಭೌಮನಾಗಿ ಘೋಷಿಸಿಕೊಂಡುದು ಕ್ರಿ. ಶ. 1162 ರಲ್ಲಿ. ಆದ್ದರಿಂದ ಅವರ ಜೀವಿತದ ಕಾಲಾವಧಿ ಆನಂದ ನಾಮ (1134) ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಿಂದ ನಳನಾಮ (1196) ಸಂವತ್ಸರದ ಶ್ರಾವಣಶುದ್ಧ ಪಂಚಮಿಯವರೆಗೆ ಎಂದು ತಿಳಿದು ಕೆಲವು ಪ್ರಮುಖ ಘಟನೆಗಳನ್ನು ಹೀಗೆ ಗುರುತಿಸಬಹುದು.

* ಡಾ. ಎಂ.ಎಂ. ಕಲಬುರ್ಗಿ, ಶ್ರೀ ಬಸವೇಶ್ವರರು. ಪುಟ 69 ಬಸವಣ್ಣನವರ ಜೀವನ ಚರಿತ್ರೆ ಪ್ರ. ಮೈಸೂರು ಸರ್ಕಾರ, 1992.

** ಡಾ. ಎಂ.ಎಂ. ಕಲಬುರ್ಗಿ, ಶ್ರೀ ಬಸವೇಶ್ವರರು. ಬಸವಣ್ಣನವರ ಜೀವನ ಚರಿತ್ರೆ ಪುಟ 76.

*** ಡಾ. ಆರ್. ಸಿ. ಹಿರೇಮಠ Sri Basaveswara Commemoration Volume Page 23.

(ಇಲ್ಲಿ ನಾನು ಸ್ಪಷ್ಟವಾಗಿ ತಿಳಿಸುವುದೇನೆಂದರೆ ಸ್ವದೇಶಿಯ ಕಾಲಮಾನದಲ್ಲಿ ಏನೂ ಬದಲಾವಣೆಯಾಗದಷ್ಟು ಖಚಿತವಾಗಿ ನಮಗೆ ಕಾಲಜ್ಞಾನ ವಚನಗಳು ದಾಖಲೆ ನೀಡುತ್ತಿವೆ. ಈಗ ಇವುಗಳಿಗೆ ಇಂಗ್ಲೀಷ್ ವರ್ಷಗಳನ್ನು ಹೊಂದಿಸಲಾಗಿದೆ. ಇಷ್ಟೇ ಅಲ್ಲ ನಾವು ಪಡೆದುಕೊಂಡಿರುವ ಕ್ರಿಸ್ತಶಕದ ವಿವರದ ಪಟ್ಟಿಯನ್ನೂ, ಈ ಪುಸ್ತಕದಲ್ಲಿ ಮುದ್ರಿಸಲಾಗಿದೆ. ಆದ್ದರಿಂದ ಯಾರೇ ವಿದ್ವಾಂಸರು, ಸಂಶೋಧಕರು ನಮ್ಮ ಖಚಿತ ನಿರ್ಧಾರಕ್ಕೆ ಭಿನ್ನಮತ ವ್ಯಕ್ತಪಡಿಸಿದರೆ ಅದು ಇಂಗ್ಲೀಷ್ ವರ್ಷ ಕುರಿತಾಗಿರುವುದೇ ವಿನಾ ಭಾರತೀಯ ವರ್ಷಗಳನ್ನಲ್ಲ)

1. ಧರ್ಮಪಿತ ಗುರುಬಸವಣ್ಣನವರ ಜನನ- ಆನಂದ ನಾಮ ಸಂವತ್ಸರದ ವೈಶಾಖ ಮಾಸದಲ್ಲಿ ಅಕ್ಷಯ ತೃತೀಯಾದಂದು, ರೋಹಿಣಿ ನಕ್ಷತ್ರದಲ್ಲಿ ಕ್ರಿ. ಶ. 1134
2. ಮನೆಯಿಂದ ಬಾಲಕನ ನಿರ್ಗಮನ ಸಂಗಮಕ್ಕೆ ಆಗಮನ. ದುಂದುಭಿನಾಮ ಸಂವತ್ಸರ ಕ್ರಿ. ಶ. 1142.
3. ಮೂರೇಳು (21) ವಯಸ್ಸಿನವರೆಗೆ ಇದ್ದು ವಿದ್ಯಾಭ್ಯಾಸ, ಗುರುಕುಲವಾಸ ಪೂರೈಸಿ ಕೂಡಲ ಸಂಗಮದಿಂದ ದೇವ ಕೃಪೆಯನ್ನು ಅವತೀರ್ಣ ಮಾಡಿಕೊಂಡು ದೇವರ ಆದೇಶವನ್ನು ಹೊತ್ತು ಮಂಗಳವಾಡಕ್ಕೆ ಹೋದುದು, ಶ್ರೀಮುಖ ಸಂವತ್ಸರದಲ್ಲಿ ಕ್ರಿ.ಶ. 1153. ಕನಸು-ಸಗುಣ ಸಾಕ್ಷಾತ್ಕಾರ-ಇಷ್ಟಲಿಂಗದ ಪರಿಕಲ್ಪನೆ ಮೂಡಿದುದು, ಹೊಸಧರ್ಮವೊಂದರ ರೂಪುರೇಷೆ ಅಂತರಂಗದಲ್ಲಿ ರೂಪುಗೊಂಡುದು ಈ ಸಂದರ್ಭದಲ್ಲಿಯೇ.
4. ಕೂಡಲ ಸಂಗಮದಿಂದ ಮಂಗಳವಾಡಕ್ಕೆ ಶ್ರೀಮುಖ ಸಂವತ್ಸರದಲ್ಲಿ ಬಂದ ಬಸವಣ್ಣನವರು ಸೋದರ ಮಾವನ ಮಗಳು ನೀಲಗಂಗಳನ್ನು ವಿವಾಹವಾಗಿ, ಕರಣಿಕ ಕಾಯಕ ಕೈಗೊಂಡರು. ಮಂಗಳವಾಡದಲ್ಲಿ ಶ್ರೀಮುಖ ಸಂವತ್ಸರ (1153) ದಿಂದ ವಿಕ್ರಮನಾಮ ಸಂವತ್ಸರ (1160) ದ ವರೆಗೆ ಸುಮಾರು ಏಳು ವರ್ಷಗಳ ಕಾಲ ಇದ್ದರು.
5. ಚಾಲುಕ್ಯದೊರೆ ತೈಲಪನು ಕಾಕತೀಯ ಪ್ರೋಲನಿಗೆ ಸೋತು (ಕ್ರಿ. ಶ.1155) ತನ್ನ ಮಾಂಡಲಿಕ ಬಿಜ್ಜಳನ ನೆರವು ಪಡೆಯಲು ಆರಂಭಿಸಿದನು. ಬಿಜ್ಜಳನು ಕ್ರಿ.ಶ. 1155 ರಿಂದ ನಿಧಾನವಾಗಿ ಬಲವರ್ಧನೆ ಮಾಡಿಕೊಳ್ಳುತ್ತ ಕಲ್ಯಾಣದಲ್ಲಿಯೇ ಇರತೊಡಗಿ ತನ್ನ ಆಡಳಿತವನ್ನೂ ಮಂಗಳವಾಡದಿಂದ ಕಲ್ಯಾಣಕ್ಕೆ ಬಂದುದು (ಕಲಿವರ್ಷದ 4192) ವಿಕ್ರಮನಾಮ ಸಂವತ್ಸರ ಶ್ರಾವಣಶುದ್ಧ ಪಂಚಮಿ ಸೋಮವಾರದ ದಿವಸ, ಅರುಣೋದಯದ ಕಾಲದಲ್ಲಿ ಕಲ್ಯಾಣವನ್ನು ಪ್ರವೇಶಿಸಿದರು. (ಕ್ರಿ.ಶ. 1160) ಬಿಜ್ಜಳನು ಅಧಿಕೃತವಾಗಿ ಚಕ್ರವರ್ತಿ ಎಂದು ಘೋಷಿಸಿಕೊಂಡುದು ಕ್ರಿ.ಶ. 1162 ಚಿತ್ರಭಾನು ಸಂವತ್ಸರದಲ್ಲಿ.



6. ಕಲ್ಯಾಣಕ್ಕೆ ಬಂದ ನಂತರ ಪ್ರಚಾರ, ದೀಕ್ಷಾಸಂಸ್ಕಾರ ಮುಂತಾದ ಕಾರ್ಯಕ್ರಮವನ್ನು ಶ್ರೀ ಗುರು ಬಸವತಂದೆಯವರು ಬೇಗನೇ ಆರಂಭಿಸಿದರೂ, ಅನುಭವ ಮಂಟಪಕ್ಕೆ ಸಾಂಸ್ಥಿಕ ರೂಪ ಬಂದು ಅದು ನಿರ್ಮಾಣವಾದುದು, ಶ್ರೀಗುರುವು ಕಲ್ಯಾಣಕ್ಕೆ ಬಂದ 9 ವರ್ಷಗಳ ಬಳಿಕ ಕ್ರಿ. ಶ. 1169 ಸರ್ವಧಾರಿ ವಿರೋಧಿ ಸಂವತ್ಸರದಲ್ಲಿ.
7. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಜನನ ನಂದನ ನಾಮ ಸಂವತ್ಸರದ ವೈಶಾಖ ಮಾಸದಲ್ಲಿ, ಶುದ್ಧ ಪಾಡ್ಯ, ಮಂಗಳವಾರದಂದು ಕೃತ್ತಿಕಾ ನಕ್ಷತ್ರದಲ್ಲಿ ಪ್ರಾತಃ ಕಾಲದಲ್ಲಿ ಕ್ರಿ. ಶ. 1172.
8. ಅಲ್ಲಮ ಪ್ರಭು - ಸಿದ್ಧರಾಮರ ಆಗಮನ ಕ್ರೋಧೀನಾಮ ಸಂವತ್ಸರ ಕ್ರಿ.ಶ. 1184. ಹನ್ನೆರಡು ವರ್ಷಗಳ ಚನ್ನಬಸವಣ್ಣನವರಿಂದ ಮಹಾಯೋಗಿ ಸಿದ್ಧರಾಮೇಶ್ವರರಿಗೆ ಲಿಂಗದೀಕ್ಷೆ ಆದುದು ಈಗಲೇ.
9. ಶೂನ್ಯ ಪೀಠಸ್ಥಾಪನೆ ಮತ್ತು ಅಲ್ಲಮ ಪ್ರಭುದೇವರ ಶೂನ್ಯಪೀಠಾರೋಹಣ ವಿಶ್ವಾವಸು ಸಂವತ್ಸರ ಚೈತ್ರ ಶುದ್ಧ ಪಾಡ್ಯ, ಯುಗಾದಿ ದಿವಸ, ಸೋಮವಾರದಂದು ರೇವತಿ ನಕ್ಷತ್ರದಲ್ಲಿ ಕ್ರಿ.ಶ.1185. ಈ ವಿಶ್ವಾವಸು ಸಂವತ್ಸರವನ್ನು ಕಾಲಜ್ಞಾನ ವಚನಗಳಲ್ಲಿ ಪ್ರಭುನಾಮ ಸಂವತ್ಸರ ಎಂದೂ ಕರೆಯಲಾಗಿದೆ.
10. ಪ್ರಭುದೇವರಿಂದ ಚನ್ನಬಸವಣ್ಣನವರಿಗೆ ಶೂನ್ಯ ಪೀಠದ ಅಧಿಕಾರ ಹಸ್ತಾಂತರವಾದುದು ರಾಕ್ಷಸನಾಮ ಸಂವತ್ಸರದ (ಕ್ರಿ.ಶ.1195) ಕಾರ್ತಿಕ ಶುದ್ಧ ಪಂಚಮಿಯಂದು.
11. ಹರಳಯ್ಯ ಮಧುವರಸರ ನಂಟಸ್ತಿಕೆ. ಶೀಲವಂತ- ಲಾವಣ್ಯವತಿಯರ ವಿವಾಹ ರಾಕ್ಷಸನಾಮ ಸಂವತ್ಸರದ ಕಾರ್ತಿಕ ಮತ್ತು ಫಾಲ್ಗುಣ ಮಾಸಗಳ ಮಧ್ಯೆ (1196).
12. ವರ್ಣಾಂತರ ವಿವಾಹಕ್ಕೆ ಪ್ರೇರಣೆ ನೀಡಿ ಪ್ರೋತ್ಸಾಹಿಸಿದ್ದಲ್ಲದೆ ನೇತೃತ್ವ ವಹಿಸಿದ್ದಕ್ಕಾಗಿ ಧರ್ಮಪಿತ ಬಸವಣ್ಣನವರು ಕಲ್ಯಾಣದಿಂದ ದಂಡಗೊಂಡು (ಗಡಿಪಾರು ಆಗಿ) ಹೊರಟುದು- ರಾಕ್ಷಸನಾಮ ಸಂವತ್ಸರದ ಫಾಲ್ಗುಣ ಮಾಸದ ದ್ವಾದಶಿ (12ನೆಯ) ದಿವಸ ಚಂದ್ರವಾರದಂದು (ಕ್ರಿ.ಶ.1196) ರ ಇಂದಿಗೂ ಬಿಜಾಪುರ ಜಿಲ್ಲೆಯ ಹಲವಾರು ಸ್ಥಳಗಳಲ್ಲಿ ದಂಡಗೊಂಡ (ಕಲ್ಯಾಣ) ಬಸವಣ್ಣನವರ ಗುಡಿಗಳನ್ನು ಕಾಣಬಹುದು.
13. ಹರಳಯ್ಯ- ಮಧುವರಸ- ಶೀಲವಂತರ ಬಂಧನ ಮತ್ತು ಕ್ಷಿಪ್ರ ವಿಚಾರಣೆ ತ್ರಯೋದಶಿಯಂದು. ಶರಣರಿಗೆ ಎಳೆಹೂಟೆ ಶಿಕ್ಷೆಯಾದುದು ಚತುರ್ದಶಿಯಂದು. ಜನರು ಮತ್ತು ಸೈನಿಕರ ನಡುವೆ ಬೀದಿಬೀದಿಗಳಲ್ಲಿ ಘರ್ಷಣೆ ಆರಂಭವಾಗಿ

ಬಿಜ್ಜಳನು ಜಗದೇವ-ಮಲ್ಲಿದೇವ-ಬೊಮ್ಮಣ್ಣರಿಂದ ಹತನಾದುದು ಫಾಲ್ಗುಣ ಮಾಸದ ಹುಣ್ಣಿಮೆ ಅಂದರೆ ಹೋಳಿ ಹುಣ್ಣಿಮೆಯಂದು, ಸೂರ್ಯಾಸ್ತವಾದ ಮೇಲೆ ಕ್ರಿ.ಶ.1196.

14. ಅಲ್ಲಮ ಪ್ರಭುದೇವರು ನಳನಾಮ ಸಂವತ್ಸರದ ಆಷಾಢ ಶುದ್ಧ ಪಾಡ್ಯ ಸೋಮವಾರ ದಂದು ಕದಳಿವನದಲ್ಲಿ ಬಯಲಾದರು.

15. ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ, ಮಂಗಳವಾರ . ಇಚ್ಛಾಮರಣದ ಪ್ರಕ್ರಿಯೆ ಬೆಳಿಗ್ಗೆ ಆರಂಭವಾದರೂ ಅದು ಸಂಪೂರ್ಣಗೊಂಡು ಆತ್ಮವು ಬಿಡುಗಡೆಗೊಂಡುದು ಸೂರ್ಯಸ್ತದ ಸಮಯದಲ್ಲಿ (ಅಂದರೆ ಸೂರ್ಯೋದಯವಾದ 28 ಗಳಿಗೆಗೆ) ಸಂಜೆ ಸುಮಾರು 5.30ಕ್ಕೆ ಕ್ರಿ.ಶ. 1196.

16. ಚೆನ್ನಬಸವಣ್ಣನವರು ಬಿಜ್ಜಳನ ವಧೆಯಾದ ಮರು ದಿವಸವೇ ಸಾಹಿತ್ಯ ಸಂರಕ್ಷಣೆಗಾಗಿ ಕಲ್ಯಾಣದಿಂದ ಹೊರಟರು. ಅವರು ಉಳಿವೆಯನ್ನು ಬಂದು ಸೇರಿದುದು ನಳನಾಮ ಸಂವತ್ಸರದ ವೈಶಾಖ ಬಹುಳ ಬಿದಿಗೆ ಬುಧವಾರ ರೋಹಿಣಿ ನಕ್ಷತ್ರದಲ್ಲಿ, ಅವರ ಜೊತೆಗೆ ಸುಮಾರು 12000 ಜಂಗಮರು ಇದ್ದರು.

17. ಮುರಗೋಡು ಯುದ್ಧದಲ್ಲಿ ಜಯಶಾಲಿಗಳಾದ ಸಂಗತಿಯನ್ನು ಬಸವಣ್ಣನವರಿಗೆ ತಿಳಿಸಲು ಹೋಗಿ, ಅವರು ಆಗಲೇ ಲಿಂಗೈಕ್ಯರಾದುದನ್ನು ತಿಳಿದು, ಕೊಂಡಾಡಿ ವಾಪಸ್ಸು ಬಂದು ಮಡಿವಾಳ ಮಾಚಿದೇವರು ಉಳಿವೆಯತ್ತ ಸಾಗುತ್ತಿರುವಾಗಲೇ ಲಿಂಗೈಕ್ಯರಾದುದು, ಕಾರ್ತಿಕ ಶುದ್ಧ ಪೌರ್ಣಮಿ ಮಂಗಳವಾರದಂದು. ಅದೇ ಸಮಯಕ್ಕೆ ಅತ್ತಬಂದ ಜಗದೇವ-ಮಲ್ಲೆ ಬೊಮ್ಮರು ಗೊಡಚಿ ಗಿಡದ ಬಳಿ ಉತ್ತರ ದಿಕ್ಕಿನಲ್ಲಿ ಮಾಚಿದೇವರ ಸಮಾಧಿಕ್ರಿಯೆ ಪೂರೈಸಿ , ಉಳಿವೆಯತ್ತ ಸಾಗಿದರು. (ಮಡಿವಾಳ ಮಾಚಿದೇವರ ಮರಣ ಗೊಡಚಿಯಲ್ಲಿಯೇ ಆಗಿರುವ ಸಂಭವವಿದೆ. ಅಲ್ಲಿಯ ಮುದಿ ವೀರಭದ್ರನ ವಿಗ್ರಹ ಟೊಂಕಕ್ಕೆ ಕಾಸಿಯನ್ನು ಕಟ್ಟಿ, ಜಂಬೆಯನ್ನಿಟ್ಟು, ಇಷ್ಟಲಿಂಗ ಭಸ್ಮ ರುದ್ರಾಕ್ಷಿಗಳನ್ನು ಧಾರಣ ಮಾಡಿದ ಒಬ್ಬ ಶಿವಯೋಗಿಯ ಮೂರ್ತಿ ಅದು ಮಾಚಿದೇವರ ಸ್ಮಾರಕವಾಗಿರುವ ಸಂಭವವಿದೆ. ಡಾ.ಆರ್. ಸಿ. ಹಿರೇಮಠ, ಪುಟ 102, ಷಟಸ್ಥಲ ಪ್ರಭೆ, 1972, ಕ.ವಿ. ಧಾರವಾಡ)

18. ಚೆನ್ನ ಬಸವಣ್ಣನವರು ಉಳಿವೆಯಲ್ಲಿ ಲಿಂಗೈಕ್ಯರಾದುದು ಕಾರ್ತಿಕ ಶುದ್ಧ ಪೌರ್ಣಮೆಯಂದು. ಕ್ರಿ.ಶ.1196. (ದುರ್ಗಮ ಅರಣ್ಯ ಪ್ರದೇಶವಾಗಿರುವುದರಿಂದಲೂ ಆ ಸಮಯದಲ್ಲಿ ನದಿಹಳ್ಳಗಳನ್ನು ದಾಟುವುದು ಕಷ್ಟಸಾಧ್ಯ ವಿದ್ದುದರಿಂದಲೂ ಮಾಘ ಪೌರ್ಣಿಮೆಯಂದು ರಥೋತ್ಸವವನ್ನು




ನಡೆಸಿಕೊಂಡು ಬರಲಾಗುತ್ತಿದೆ.) ಚೆನ್ನಬಸವಣ್ಣನವರ ಜೀವಿತಾವಧಿ 24 ವರ್ಷಗಳು ಎಂದು ಈಗಾಗಲೇ ತಿಳಿಸಲಾಗಿದೆ.

ಭಾರತೀಯ ಕಾಲಮಾನವನ್ನು ಕ್ರಿಸ್ತ ಶಕಕ್ಕೆ ಪರಿವರ್ತಿಸುವಾಗ ಎರಡು ಆಂಗ್ಲ ವರ್ಷಗಳು ಬರುತ್ತವಾದರೂ ಚೈತ್ರ ಮಾಸವು ಸಾಮಾನ್ಯವಾಗಿ ಏಪ್ರಿಲ್‌ದಲ್ಲಿ ಬರುವುದರಿಂದ ನಂತರದ ವರ್ಷದ ಹೆಚ್ಚಿನ ಭಾಗವು ಇದರಲ್ಲಿ ಬರುತ್ತದೆ. ಆದ್ದರಿಂದ ಬಸವಣ್ಣನವರು ಹುಟ್ಟಿದುದು ಆನಂದನಾಮ ಸಂವತ್ಸರದ ವೈಶಾಖ ಮಾಸದಲ್ಲಿ, ಆದ ಕಾರಣ ಬಸವ ಶಕೆಯನ್ನು ಕ್ರಿ.ಶ.1134 ರಿಂದ ಹಿಡಿಯಬೇಕು.

## ನಮ್ಮ ಬದಲಾವಣೆಗೆ ಕಾರಣ

ಕೆಲವು ವಿದ್ವಾಂಸರ ಅನಿಸಿಕೆಯಂತೆ ಕ್ರಿ.ಶ.1106 ರಲ್ಲಿ ಬಸವಣ್ಣನವರ ಜನನ ಮತ್ತು 1168 ರಲ್ಲಿ ಲಿಂಗೈಕ್ಯ ಎಂದು ಈ ವರೆಗೆ ತಿಳಿದುದನ್ನು ಬದಲಾಯಿಸಿ ಕ್ರಿ.ಶ.1134 ರಲ್ಲಿ ಜನನ ಮತ್ತು 1196 ರಲ್ಲಿ ಲಿಂಗೈಕ್ಯ ಎಂದು ಅಧಿಕೃತವಾಗಿ ಒಪ್ಪಿ ಘೋಷಿಸಲು ವಿಪುಲವಾದ ಕಾರಣಗಳಿವೆ.

1. ಕ್ರಿ.ಶ.1106 ವ್ಯಯನಾಮ ಸಂವತ್ಸರ, 1132 ಪರಿಧಾವಿ ಸಂವತ್ಸರ, 1144 ರಕ್ತಾಕ್ಷಿ ಸಂವತ್ಸರ, 1167 ಸರ್ವಜಿತುನಾಮ ಸಂವತ್ಸರ 1168 ಸರ್ವಧಾರಿನಾಮ ಸಂವತ್ಸರ. ಹೀಗಾಗಿ ಕಾಲಜ್ಞಾನ ವಚನಗಳಲ್ಲಿ ಉಲ್ಲೇಖವಾದ ಸಂವತ್ಸರಗಳ ಹೆಸರು ಒಂದೂ ಹೊಂದುವುದಿಲ್ಲ. ಕಾಲಜ್ಞಾನದಲ್ಲಿ ಉಲ್ಲೇಖವಾಗುವ ಆನಂದ ನಾಮ-1134, ವಿಕ್ರಮನಾಮ-1160, ರಾಕ್ಷಸನಾಮ-1195 ನಳನಾಮ-1196 ಸಂವತ್ಸರಗಳು ಸಂಪೂರ್ಣವಾಗಿ ಮತ್ತು ಚೆನ್ನಬಸವಣ್ಣ ಹುಟ್ಟಿದ ನಂದನ ನಾಮ ಸಂವತ್ಸರ -1172 ಸಂಪೂರ್ಣವಾಗಿ ಪರಸ್ಪರ ಹೊಂದುತ್ತವೆ. ಆದ್ದರಿಂದ ಸಾಧಾರಪೂರ್ವಕವಾಗಿ ನಮ್ಮ ತಿಳುವಳಿಕೆಯನ್ನು ಬದಲಿಸಿಕೊಂಡು ಅಧಿಕೃತವಾಗಿ ದಿನಾಂಕಗಳನ್ನು ಘೋಷಿಸಲಾಗುತ್ತಿದೆ.

ಡಾ. ಆರ್.ಸಿ ಹಿರೇಮಠರು ಷಟಸ್ಥಲ ಪ್ರಭೆ ಎಂಬ ಕೃತಿಯ ಪುಟ 104 ರಿಂದ 110ರ ವರೆಗೆ ಕಾಲಜ್ಞಾನ ವಚನ (ಫ.ಗು. ಹಳಕಟ್ಟಿ)ಗಳ ಆಧಾರದ ಮೇಲೆ ಕೆಲವೊಂದು ವಿವರ ನೀಡಿದ್ದಾರೆ. ಭಾರತೀಯ ಸಂವತ್ಸರಗಳ ಹೆಸರಿನಲ್ಲಿ ನಮ್ಮ ಅವರ ವಿವರಗಳಲ್ಲಿ ವ್ಯತ್ಯಾಸವಿಲ್ಲ. ಆದರೆ ಬಸವಣ್ಣನವರ ಲಿಂಗೈಕ್ಯವು ನಳನಾಮ ಸಂವತ್ಸರ (ರಾಕ್ಷಸ ) ಎಂದು ಹೇಳಿ 1168ಕ್ಕೆ ನಿಲ್ಲಿಸುತ್ತಾರೆ. ಇದು ತಪ್ಪು. 1168ರಲ್ಲಿ ಕ್ರಿಸ್ತ ಶಕ ಸರ್ವಧಾರಿ-ವಿರೋಧಿ ಬರುತ್ತವೆ. ಮುಂದಿನ ಪುಟಗಳಲ್ಲಿ ಇಸವಿಗಳ ವಿವರ ನೀಡಲಾಗಿರುವುದನ್ನೂ ಗಮನಿಸಿರಿ.

2. ಬಿಜ್ಜಳ ಮಹಾರಾಜನು 1195-96ರ ವರೆಗೆ ಬದುಕಿದ್ದ ಉಲ್ಲೇಖಗಳು ಶಾಸನೋಕ್ತವಾಗಿರುವುದರಿಂದ ಬಸವಣ್ಣನವರು 1168ರಲ್ಲಿ ಲಿಂಗೈಕ್ಯರಾದರೆಂಬ ನಂಬಿಕೆ ವಿರೋಧಾಭಾಸವನ್ನು ಒಡ್ಡುತ್ತದೆ. ಬಿಜ್ಜಳನು ಹತನಾದ ಮೇಲೆಯೇ ಬಸವಣ್ಣನವರು ಲಿಂಗೈಕ್ಯರಾಗಿರುವುದು ಎಂಬುದು ನಿರ್ವಿವಾದಾತ್ಮಕವಾಗಿ ಖಚಿತವಾಗುತ್ತದೆ. ಸ್ವತಃ ಧರ್ಮಪಿತರ ಈ ವಚನ ನೋಡೋಣ.

1. ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ ಮಾನವಾ
ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ! ಶಿವಾಚಾರದ
ಅಭಿಮಾನದಿಂದ ಜಗದೇವ ಮೊಲ್ಲೆ ಬೊಮ್ಮಣ್ಣಗಳ ಕೈಯಲ್ಲಿ ಮಡಿದಿಹನು
ಬಿಜ್ಜಳ ಚಾಲುಕ್ಯರಾಯನ ಆಳಿಕೆ ತೆಗೆಯಿತ್ತು! ಸಡಲಿತ್ತು,
ಕೂಡಲ ಸಂಗಮದೇವಾ ನಿಮ್ಮ ಕವಳಿಗೆ.

2. ಅಮೃತಮಥನದಲ್ಲಿ ಅಜ ಹರಿ ಸುರಪ ವಾಲಿ ಸುಗ್ರೀವರಳಿದರು.
ಕಾಶಿಯಲ್ಲಿ ಬ್ರಹ್ಮ ವಿಷ್ಣುಗಳಳಿದರು.
ಕೇದಾರದಲ್ಲಿ ಪಾಂಡುವರಳಿದರು, ಕಲ್ಯಾಣದಲ್ಲಿ ವ್ಯಾಳನಳಿದನು.
ಶ್ರೀ ಶೈಲದಲ್ಲಿ ಹಿರಣ್ಯ ಧನುಜ ನಾಗಾರ್ಜುನರಳಿದರು.
ಪಾತಾಳ ಲಂಕೆಯಲ್ಲಿ ಮಹಿರಾವಣನಳಿದನು.
ಲವಣ ಲಂಕೆಯಲ್ಲಿ ಲಕ್ಷ್ಮಿಗಳುಪಿದವನಳಿದನು
ದಶರಥನ ತೋಹಿನಲ್ಲಿ ಮಂಡು ಬಲಚೌಡನಳಿದನು
ಭೀಮನ ಕೈಯಲ್ಲಿ ಕೀಚಕನಳಿದನು.
ಮುನಿ ಕರ್ಣಿಕೆಯ ಶಿರವ ಹರಿದು, ಸುರಪನಜಹರಿಗಳು ಶಾಪಹತರಾದರು
ಋಷಿಯ ಸತಿಗಳುಪಿ ಸುರಪ ಮೈಯನಳಿದ
ಭೀಷ್ಮರು ಕುಂಭಕರ್ಣ ದ್ರೋಣ ಜಾಂಬರು ನಿದ್ರೆಯಲ್ಲಿ ಅಳಿದರು
ವ್ಯಾಧರ ಬಾಣದಲ್ಲಿ ಬಿದ್ದರು ವಿಷ್ಣು ಪಾಂಡ್ಯರಾಯರು.
ವಿಷದ ಪಣ್ಣಿಂದಳಿದ ಪರೀಕ್ಷಿತರಾಯನು
ಪರಶುರಾಮನ ಕೈಯಲ್ಲಿ ಜಮದಗ್ನಿ ಮುನಿಯ ವಧೆಯಿಂದ ಕಾರ್ತಿಕರಳಿದರು
ವೃಷಭನ ವಧೆಯಿಂದ ವೀತರಾಜನಳಿದ
ಕುರುಕ್ಷೇತ್ರದಲ್ಲಿ ಕೌರವರಳಿದರು.
ಮಾಸನೂರಲ್ಲಿ ಸಿದ್ಧರಳಿದರು
ಕೊಲ್ಲಾಪುರದಲ್ಲಿ ಹರಿ ಅಜ ಇಂದ್ರ ದಿಕ್ಪಾಲಕರು ತೃಣಕೆ ಲಘುವಾದರು.
ಹೋಮಕಾಮ ತ್ರಿಣೇತ್ರ ಪಂಚಮುಖರೆಲ್ಲ ಮಹಾಪ್ರಳಯದಲ್ಲಿ ಅಳಿದರು.
ಇನ್ನು ಬಿಜ್ಜಳರಾಜನ ಅಳಿವಿನುಳಿವಿನ ಹವಣವೇನು ಕಲಿದೇವರದೇವಾ (19)



ದುರ್ಮರಣಕ್ಕೆ ಒಳಗಾದ ದೊಡ್ಡವರ ಹೆಸರುಗಳನ್ನು ಪಟ್ಟಿಮಾಡಿ ಇಂತಿಂಥವರೇ ದುರ್ಮರಣಕ್ಕೆ ಈಡಾಗಿದ್ದಾರೆ. ಇನ್ನು ಬಿಜ್ಜಳನ ಅಳಿಯುವಿಕೆ ಯಾವ ದೊಡ್ಡತರಪದ್ದು ಎಂಬ ಭಾವ ಮಾಚಿದೇವರ ವಚನದಲ್ಲಿ ವ್ಯಕ್ತವಾಗಿದೆ. ಇದು ಬಿಜ್ಜಳನು ದುರ್ಮರಣಕ್ಕೆ ಈಡಾದ ಎಂಬುದನ್ನು ಖಚಿತ ಪಡಿಸುತ್ತದೆ.

ಬಿಜ್ಜಳನನ್ನು ಕೊಂದ ಜಗದೇವನ ಹೆಸರು ಮರಡೀಪುರ ಶಾಸನದಲ್ಲಿ ಉಕ್ತವಾಗಿದೆ. ಶಾಂತರ ವಂಶಸ್ಥನಾದ ಈತನು ಬಿಜ್ಜಳನ ಸೈನಿಕರಿಂದ ದಮನಿಸಲ್ಪಟ್ಟ ಉಲ್ಲೇಖ ಅಲ್ಲಿರುವುದರಿಂದ ಅವನು ರೋಷತಪ್ತನಾಗಿದ್ದ ಎಂದು ಊಹಿಸಬಹುದು. ಅದೇ ರೀತಿ ಕೊಂಜಾಪುರ ಶಾಸನದಲ್ಲಿ ಗುಟ್ಟರಸ ವಂಶದವನಾದ ಮಲ್ಲಿದೇವನಿಗೆ **ಬಿಜ್ಜಿಗ ಶಿರಶ್ಛೇದಕ** ಎಂಬ ವಿಶೇಷಣವಿದೆ. ಈ ಮಲ್ಲಿದೇವನ ಹಿಂದಿನವರೆಲ್ಲ ಚಾಲುಕ್ಯ ನಿಷ್ಠ ಸಾಮಂತರಾಗಿದ್ದರು. ಬೊಮ್ಮಯ್ಯನು ತೋರಗಲ್ ವಂಶದವನಾಗಿ ನಂತರ ಅವನಿಗೆ ಚಾಲುಕ್ಯ ರಾಜ್ಯ ಪ್ರತಿಷ್ಠಾಪಕ ಎಂಬ ಕೀರ್ತಿ ಬಂದಿತು. ಇದರಿಂದ ಜಗದೇವ, ಮಲ್ಲಿದೇವ, ಬೊಮ್ಮಣ್ಣ ಮೂವರೂ ಬಿಜ್ಜಳನ ವಧೆಗೆ ಕಾರಣರೆಂದು ತಿಳಿಯಬಹುದು.

ಆದ್ದರಿಂದ ಬಿಜ್ಜಳನು ತನ್ನ ಮಗನಿಗೆ ಪಟ್ಟಗಟ್ಟಿ ವಿಶ್ರಾಂತಿ ಜೀವನದಲ್ಲಿ ಇದ್ದ ಎಂಬ ಕೆಲವರ ಅಭಿಪ್ರಾಯ ಒಪ್ಪಲು ಸಾಧ್ಯವಿಲ್ಲ, ಕರ್ನಾಟಕ ಆಂಧ್ರಗಳ ಸಾಂಸ್ಕೃತಿಕ ಧಾರ್ಮಿಕ ಸಂಬಂಧ ಬಹುನಿಕಟ ಧರ್ಮ ಪ್ರಚಾರಕರಾದ ಜಂಗಮರ ಮೂಲಕ ಲಿಂಗವಂತ ಧರ್ಮ ಹಬ್ಬುತ್ತಿದ್ದ ಸಮಯವದು. ಮಲ್ಲಿಕಾರ್ಜುನ ಪಂಡಿತಾರಾಧ್ಯರು ವಿಶ್ವಗುರು ಬಸವಣ್ಣನವರ ಪ್ರಭಾವಕ್ಕೆ ಒಳಗಾದರು. ಧರ್ಮ ಪ್ರಚಾರಕ ಜಂಗಮರ ಮೂಲಕ ಬಸವ ತಂದೆಯವರು ಕಳುಹಿಸಿದ ಮಂತ್ರೋದ್ದೀಪಿತ ವಿಭೂತಿಯನ್ನು ಧರಿಸಿಕೊಳ್ಳುತ್ತಲೇ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರಿಗೆ ಕನ್ನಡ ಭಾಷೆಯಲ್ಲಿ ಪಾಂಡಿತ್ಯವು ಉಂಟಾಯಿತಂತೆ. ಇವರು ಬಸವಣ್ಣನವರ ದರ್ಶನ ಮಾಡಲೆಂದು ಕಲ್ಯಾಣದತ್ತ ಪಯಣಿಸಿದರು . ಪ್ರಯಾಣದ ಮಧ್ಯೆ ವನಿಪುರ ಎಂಬಲ್ಲಿ ವಾಸ್ತವ್ಯ ಮಾಡಿರುವಾಗಲೇ ಬಸವಣ್ಣನವರು ಕಲ್ಯಾಣದಿಂದ ನಿರ್ಗಮಿಸಿದುದು, ಕೂಡಲ ಸಂಗಮದಲ್ಲಿ ಲಿಂಗೈಕ್ಯರಾದುದು ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರಿಗೆ ತಿಳಿದು ಬಂದು ಬಹಳ ದುಃಖಿತರಾದರು. ಆಗ ಅವರು ಶೋಕಗೀತೆಯೊಂದನ್ನು ಬರೆದು ತಮ್ಮ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಮುಂದಿನ ಶಿವರಾತ್ರಿಯವರೆಗೆ ಇದ್ದು ವೆಲ್ಲಟೂರಿನಲ್ಲಿ ದೇಹಾವಸಾನ ಮಾಡಿದರು.

ಮಲ್ಲಿಕಾರ್ಜುನ ಪಂಡಿತಾರಾಧ್ಯರ ಜೀವನವನ್ನು ಆಧರಿಸಿ ಸಹ ಬಸವಣ್ಣನವರು 1168ರಲ್ಲಿ ಲಿಂಗೈಕ್ಯರಾಗದೆ ಇನ್ನೂ ಹೆಚ್ಚುಕಾಲ ಬದುಕಿದ್ದರು ಎಂದು ನಿರ್ಧರಿಸಲು ವಿಪುಲ ಅವಕಾಶವಿದೆ. ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮಾತನಾಡುತ್ತ ಅಸ್ಪಷ್ಟವಾಗಿ ಬರೆಯುವುದರಿಂದ ಜನರಲ್ಲಿ ಗೊಂದಲವೇ ಜಾಸ್ತಿಯಾಗುವುದಾದ ಕಾರಣ ಇದಕ್ಕೆ ಪೂರ್ಣವಿರಾಮ ನೀಡಿ ಖಚಿತ ನಿರ್ಧಾರಕ್ಕೆ ಬಂದು ಇಂದು ಘೋಷಿಸಲಾಗುತ್ತಿದೆ.

ಶ್ರೀ ಗುರು ಬಸವಣ್ಣನವರ ಜನನ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಕ್ರಿ. ಶ. 1134. ಲಿಂಗೈಕ್ಯವು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನದಂದು ಕ್ರಿ. ಶ. 1196ರಲ್ಲಿ. ಬಸವ ಶಕೆ 862ನೆಯ ದಿನ, ಬಸವ ಜಯಂತಿಯ ಶುಭ ದಿನದಂದು ಈ ಖಚಿತವಾಗಿ ನಿರ್ಧಾರವನ್ನು ಶರಣ ಬಂಧುಗಳ ಮುಂದೆ ಇಡಲು ಹರ್ಷವೆನಿಸುತ್ತಿದೆ.

2.5.1995. ಬಸವ ಜಯಂತಿ

-ಮಾತಾಜಿ

## ದೇವರ ಕರುಣೆಯ ಕಂದ

ಹರನಟ್ಟಿದಾಗ್ರಹ ನಿಗ್ರಹದ ಬೆಸನ
ಗುರುನಿರೂಪವೆಂದು ಕೈಕೊಂಡು, ಕರುಣಿ ಬಸವಣ್ಣ
ಕೈಲಾಸದಿಂದ ಗುರುಲಿಂಗ ಜಂಗಮಕ್ಕೆ,
ಭಕ್ತಿಯ ಮಾಡಬೇಕೆಂದು ಏಳನೂರೆಪ್ಪತ್ತು ಅಮರಗಣಂಗಳು
ಸಹಿತ ಮರ್ತ್ಯಲೋಕಕ್ಕೆ ತಂದನಯ್ಯಾ.

ಶಿವಸಮಯಕ್ಕಾಧಾರವಾದನಯ್ಯಾ, ಬಸವಣ್ಣನು,
ಲೋಕಾದಿಲೋಕಂಗಳಿಗೆ,
ಪರಮಗುರುವಾದನಯ್ಯಾ ಬಸವಣ್ಣನು.
ಜಡರುಗಳ ಮನದ ಕತ್ತಲೆಯ ಕಳೆಯಲೆಂದು,
ಕಟ್ಟಿತ್ತು ಕಲ್ಯಾಣದಲ್ಲಿ ಮಹಾಮಠವು

ಪರಮನಟ್ಟಿದ ಓಲೆ ಬಂದಿಳಿಯಿತ್ತು ಬಿಜ್ಜಳನ ಸಿಂಹಾಸನದ ಮುಂದೆ:
ಅದ ತಂದು ಓದಿದಡೆ, ಸೃಷ್ಟಿಯ ಸೇನಬೋವರಿಗೆ ತಿಳಿಯದು
ಛಪ್ಪನ್ನ ದೇಶದ ಭಾಷೆಯ ಲಿಪಿ ಮುನ್ನವಲ್ಲ

ಇದನೋದಿದವರಿಗೆ ಆನೆ, ಸೇನೆ, ಕುದುರೆ, ಭಂಡಾರ,
ಅರವತ್ತಾರು ಕರಣಿಕರಿಗೆ ಮುಖ್ಯನ ಮಾಡುವೆನೆಂದು,
ಬಿಜ್ಜಳ ಭಾಷೆಯ ಕೊಡುತ್ತಿರಲು,
ಹರನಿರೂಪವ ಶಿರದ ಮೇಲಿಟ್ಟು ಶಿವ- ಶರಣೆಂದು,
ಬಸವಣ್ಣನೋದಿ, ಮೆಟ್ಟಿ ತೆಗೆಸಿದನಯ್ಯಾ
ಅರವತ್ತಾರುಕೋಟಿ ವಸ್ತುವ ಅರಮನೆಗೆ.
ರಾಜ್ಯಕ್ಕೆ, ಅರಮನೆಗೆ ಒಡೆಯನಾಗಿ,
ಹರಗಣಂಗಳಿಗೆ ಗತಿ- ಮತಿ- ಚೈತನ್ಯನಾಗಿ
ಕೂಡಲ ಚೆನ್ನಸಂಗಯ್ಯನಲ್ಲಿ
ಅಂಡಜದೊಳಗಿದ್ದು ಶಿವನ ಭಂಡಾರಿಯಾದನಯ್ಯಾ,
ಎನ್ನ ತಂದೆ **ಪೂರ್ವಾಚಾರಿ ಸಂಗನ ಬಸವಣ್ಣನು**

- ಚೆನ್ನಬಸವಣ್ಣನವರು



ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯ ಕೃತ

## ಬಸವ ಶೋಕ ಚರಮ ಗೀತೆ

(ಗುರುಲಿಂಗ) ಬಸವ (ಶಿವಲಿಂಗ) ಬಸವ (ಚರಲಿಂಗ) ಬಸವ। ಪರಮಗುರುಬಸವ
ಮತ್ಸ್ವಾಮಿ ಬಸವ। ಹರಸದೃಶಬಸವ। ಭಂಡಾರಿ ಬಸವ। ಗುರುಬಸವಲಿಂಗ ॥1॥

ಭಕ್ತಿರಸಕೂಪ। ಸಂವಿತ್ಪ್ರದೀಪ। ಜಿತೇಕ್ಷುಚಾಪ। ಸತ್ಯ ಪ್ರಲಾಪ
ಚರಲಿಂಗ ರೂಪ। ಸುವಿನುತಭೂಪ। ಬಂಧುರ ಕಲಾಪ। ಗುರುಬಸವಲಿಂಗ ॥2॥

ಸ್ಥಿರಭಕ್ತಿಗಣ್ಯ। ಜಗದಗ್ರ ಗಣ್ಯ। ಕರುಣಾಬ್ಧಿ(ಪುಣ್ಯ)। (ನಷ್ಟ) ಕಾರ್ಪಣ್ಯ।
ನಿಖಿಲಶರಣ್ಯ। ವಿಸ್ಫುರಿತ ಪುಣ್ಯ। ಶರಣ್ಯವರೇಣ್ಯ। ಗುರುಬಸವಲಿಂಗ ॥3॥

ಮಹಿತ ಪ್ರಮೋದ। ಬಂಧುರಸುನಾದ। ಸದ್ಯಃ ಪ್ರಸಾದ। ಸೇವಾವಿನೋದ।
ಜಂಗಮಾಹ್ಲಾದ। ಶರ್ವಾವಿಭೇದ। ಧಿಕ್ಕೃತವಿಷಾದ। ಗುರುಬಸವಲಿಂಗ ॥4॥

ಸಂಯಮಾಧಾರ। ಸೌಮ್ಯಶರೀರ। ಜಗದೇಕವೀರ। ಸಂಸ್ಕೃತಿ (ವಿ) ದೂರ।
ಸುಶಮಿತವಿಕಾರ। ಶಂಭುಕುಮಾರ। ಸುಶ್ರುತ ವಿಚಾರ। ಗುರುಬಸವಲಿಂಗ ॥5॥

ಸಮಯೋಚಿತಾವಚರಣ। ಸದಸದ್ವಿಚರಣ। ಸದಯಾಪ್ತಚರಣ। ಸದ್ಭಕ್ತಶರಣ।
ಶೈವವಿಸ್ಫುರಣ। ಶಾಂತಿವಿಹರಣ। ಶಿವಮತೋದ್ಧರಣ। ಗುರುಬಸವಲಿಂಗ ॥6॥

ಸತ್ಪಥಾಚಾರ್ಯ। ಸಂಗೀತಧುರ್ಯ। ಸುವಿದ್ಧಧೈರ್ಯ। ಸಹಜಗಾಂಭೀರ್ಯ।
ಉಪಚಿತ ಶೌರ್ಯ। ಸಾತ್ತ್ವಿಕ ಸ್ಥೈರ್ಯ। ಭಾಸುರೋಧಾರ್ಯ। ಗುರುಬಸವಲಿಂಗ ॥7॥

ಸೌಮ್ಯಚರಿತ್ರ। ಕರುಣಾಮ (ಹ) ತ್ರ। ಸದ್ಧರ್ಮಗಾತ್ರ। ಷಡ್ವರ್ಗ (ಚೈತ್ರ)
(ಸುಶರಣ) ಚೈತ್ರ। ಸಾಧಿತಾಮಿತ್ರ। ಸಂಗಮಕ್ಷೇತ್ರ। ಗುರುಬಸವಲಿಂಗ ॥8॥

ಸದ್ವ್ರತೋತ್ತುಂಗ। ಕರುಣಾಪಾಂಗ। ಸಂಹೃತಾನಂಗ। ಸತತಾ (ನು) ಭಂಗ।
ಸದ್ಭಕ್ತಿಪುಂಗ। ಸಂಗೀತರಂಗ। ವೇದಪ್ರಸಂಗ। ಗುರುಬಸವಲಿಂಗ ॥9॥

ಸಾಕ್ಷಾನ್ಮಹೇಶಾಂಗ। ಸದ್ಗುರುಲಿಂಗ। ಪದ ಪದ್ಮ ಚರಲಿಂಗ। ವಿಲಸದ್ಭಂಗ
ಪಶುಪತಿಚರಣಾಂಗ। ನಿಹಿತಾಂತರಂಗ। (ಲಿಂಗಾಂಗಸಂಗ)। ಗುರುಬಸವಲಿಂಗ ॥10॥

ಮದ್ಭರ್ತೃ, ಮತ್ತಾತ, ಬಸವಣ್ಣ ಬಸವ ಸುಕುಮಾರ, ಬಸವೇಶ್ವರನೆ! ಬಸವ! ಎನ್ನಣ್ಣ ಎನ್ನಯ್ಯ, ಎನ್ನಯಮನೋಬಿಸಜವಿಕಸನಸೂರ್ಯನೆ! ಎನ್ನನಿಲ್ಲಿರಿಸಿ ನೀನೋರ್ವನೇ ಮುದದೊಳು ಕುಸುಮ ಶರಹರಗರ್ಭಮಂ ಪುಗವುದುಚಿತಮೇ? ಬಸವಣ್ಣ ಹಾ! ಬಸವದೇವ ಹಾ! ಎನ್ನಾಳ್ದ ಬಸವಯ್ಯ ಹಾ! ಬಸವಗುರುವೆ ಹಾ! ಬಸವಲಿಂಗವೆ ಹಾ!

- ಸಂಪಾದನೆಯ ಗಿರಿರಾಜ ಪುನರ್ನಿರ್ಮಿತ
ಶ್ರೀ ಮತ್ಪಂಡಿತಾರಾಧ್ಯ ಮಲ್ಲಿಕಾರ್ಜುನ ದೇವಕೃತ

## ಸಂವತ್ಸರಗಳು (ಭಾರತೀಯ) – ಕ್ರಿಸ್ತಶಕ ವರ್ಷಗಳು

| | | | | | | | |
|---|---|---|---|---|---|---|---|
| 1. | ಪ್ರಭವ | 1087 | 1147 | 1927 | 1987 | ಪ್ರಭವ | 1 |
| 2. | ವಿಭವ | 1088 | 1148 | 1928 | 1988 | ವಿಭವ | 2 |
| 3. | ಶುಕ್ಲ | 1089 | 1149 | 1929 | 1989 | ಶುಕ್ಲ | 3 |
| 4. | ಪ್ರಮೋದೂತ | 1090 | 1150 | 1930 | 1990 | ಪ್ರಮೋದೂತ | 4 |
| 5. | ಪ್ರಜೋತ್ಪತ್ತಿ | 1091 | 1151 | 1931 | 1991 | ಪ್ರಜೋತ್ಪತ್ತಿ | 5 |
| 6. | ಆಂಗೀರಸ | 1092 | 1152 | 1932 | 1992 | ಆಂಗೀರಸ | 6 |
| 7. | ಶ್ರೀಮುಖ | 1093 | 1153 | 1933 | 1993 | ಶ್ರೀಮುಖ | 7 |
| 8. | ಭಾವ | 1094 | 1154 | 1934 | 1994 | ಭಾವ | 8 |
| 9. | ಯುವ | 1095 | 1155 | 1935 | 1995 | ಯುವ | 9 |
| 10. | ಧಾತು | 1096 | 1156 | 1936 | 1996 | ಧಾತು | 10 |
| 11. | ಈಶ್ವರ | 1097 | 1157 | 1937 | 1997 | ಈಶ್ವರ | 11 |
| 12. | ಬಹುಧಾನ್ಯ | 1098 | 1158 | 1938 | 1998 | ಬಹುಧಾನ್ಯ | 12 |
| 13. | ಪ್ರಮಾಥಿ | 1099 | 1159 | 1939 | 1999 | ಪ್ರಮಾಥಿ | 13 |
| 14. | ವಿಕ್ರಮ | 1100 | 1960 | 1940 | 2000 | ವಿಕ್ರಮ | 14 |
| 15. | ವಿಷು (ವೃಷ) | 1101 | 1161 | 1941 | 2001 | ವಿಷು(ವೃಷ) | 15 |
| 16. | ಚಿತ್ರಭಾನು | 1102 | 1162 | 1942 | 2002 | ಚಿತ್ರಭಾನು | 16 |
| 17. | ಸ್ವಭಾನು | 1103 | 1163 | 1943 | 2003 | ಸ್ವಭಾನು | 17 |
| 18. | ತಾರಣ | 1104 | 1164 | 1944 | 2004 | ತಾರಣ | 18 |
| 19. | ಪಾರ್ಥಿವ | 1105 | 1165 | 1945 | 2005 | ಪಾರ್ಥಿವ | 19 |
| 20. | ವ್ಯಯ | 1106 | 1166 | 1946 | 2006 | ವ್ಯಯ | 20 |
| 21. | ಸರ್ವಜಿತು | 1107 | 1167 | 1947 | 2007 | ಸರ್ವಜಿತು | 21 |
| 22. | ಸರ್ವಧಾರಿ | 1108 | 1168 | 1948 | 2008 | ಸರ್ವಧಾರಿ | 22 |
| 23. | ವಿರೋಧಿ | 1109 | 1169 | 1949 | 2009 | ವಿರೋಧಿ | 23 |
| 24. | ವಿಕೃತಿ | 1110 | 1170 | 1950 | 2010 | ವಿಕೃತಿ | 24 |
| 25. | ಖರ | 1111 | 1171 | 1951 | 2011 | ಖರ | 25 |
| 26. | ನಂದನ | 1112 | 1172 | 1952 | 2012 | ನಂದನ | 26 |
| 27. | ವಿಜಯ | 1113 | 1173 | 1953 | 2013 | ವಿಜಯ | 27 |
| 28. | ಜಯ | 1114 | 1174 | 1954 | 2014 | ಜಯ | 28 |
| 29. | ಮನ್ಮಥ | 1115 | 1175 | 1955 | 2015 | ಮನ್ಮಥ | 29 |
| 30. | ದುರ್ಮುಖಿ | 1116 | 1176 | 1956 | 2016 | ದುರ್ಮುಖಿ | 30 |



## ಸಂವತ್ಸರಗಳು (ಭಾರತೀಯ) – ಕ್ರಿಸ್ತಶಕ ವರ್ಷಗಳು

| | | | | | | | |
|---|---|---|---|---|---|---|---|
| 31. | ಹೇವಿಳಂಬಿ | 1117 | 1177 | 1957 | 2017 | ಹೇವಿಳಂಬಿ | 31 |
| 32. | ವಿಳಂಬಿ | 1118 | 1178 | 1958 | 2018 | ವಿಳಂಬಿ | 32 |
| 33. | ವಿಕಾರಿ | 1119 | 1179 | 1959 | 2019 | ವಿಕಾರಿ | 33 |
| 34. | ಶಾರ್ವರಿ | 1120 | 1180 | 1960 | 2020 | ಶಾರ್ವರಿ | 34 |
| 35. | ಪ್ಲವ | 1121 | 1181 | 1961 | 2021 | ಪ್ಲವ | 35 |
| 36. | ಶುಭಕೃತು | 1122 | 1182 | 1962 | 2022 | ಶುಭಕೃತು | 36 |
| 37. | ಶೋಭಕೃತು | 1123 | 1183 | 1963 | 2023 | ಶೋಭಕೃತು | 37 |
| 38. | ಕ್ರೋಧಿ | 1124 | 1184 | 1964 | 2024 | ಕ್ರೋಧಿ | 38 |
| 39. | ವಿಶ್ವಾವಸು | 1125 | 1185 | 1965 | 2025 | ವಿಶ್ವಾವಸು | 39 |
| 40. | ಪರಾಭವ | 1126 | 1186 | 1966 | 2026 | ಪರಾಭವ | 40 |
| 41. | ಪ್ಲವಂಗ | 1127 | 1187 | 1967 | 2027 | ಪ್ಲವಂಗ | 41 |
| 42. | ಕೀಲಕ | 1128 | 1188 | 1968 | 2028 | ಕೀಲಕ | 42 |
| 43. | ಸೌಮ್ಯ | 1129 | 1189 | 1969 | 2029 | ಸೌಮ್ಯ | 43 |
| 44. | ಸಾಧಾರಣ | 1130 | 1190 | 1970 | 2030 | ಸಾಧಾರಣ | 44 |
| 45. | ವಿರೋಧಿಕೃತು | 1131 | 1191 | 1971 | 2031 | ವಿರೋಧಿಕೃತು | 45 |
| 46. | ಪರಿಧಾವಿ | 1132 | 1192 | 1972 | 2032 | ಪರಿಧಾವಿ | 46 |
| 47. | ಪ್ರಮೋಧೀಚ | 1133 | 1193 | 1973 | 2033 | ಪ್ರಮೋಧೀಚ | 47 |
| 48. | ಆನಂದ | 1134 | 1194 | 1974 | 2034 | ಆನಂದ | 48 |
| 49. | ರಾಕ್ಷಸ | 1135 | 1195 | 1975 | 2035 | ರಾಕ್ಷಸ | 49 |
| 50. | ನಳ | 1136 | 1196 | 1976 | 2036 | ನಳ | 50 |
| 51. | ಪಿಂಗಳ | 1137 | 1197 | 1977 | 2037 | ಪಿಂಗಳ | 51 |
| 52. | ಕಾಳಯುಕ್ತ | 1138 | 1198 | 1978 | 2038 | ಕಾಳಯುಕ್ತಿ | 52 |
| 53. | ಸಿದ್ಧಾರ್ಥಿ | 1139 | 1199 | 1979 | 2039 | ಸಿದ್ಧಾರ್ಥಿ | 53 |
| 54. | ರೌದ್ರಿ | 1140 | 1200 | 1980 | 2040 | ರೌದ್ರಿ | 54 |
| 55. | ದುರ್ಮತಿ | 1141 | 1201 | 1981 | 2041 | ದುರ್ಮತಿ | 55 |
| 56. | ದುಂದುಭಿ | 1142 | 1202 | 1982 | 2042 | ದುಂದುಭಿ | 56 |
| 57. | ರುಧಿರೋದ್ಗಾರಿ | 1143 | 1203 | 1983 | 2043 | ರುಧಿರೋದ್ಗಾರಿ | 57 |
| 58. | ರಕ್ತಾಕ್ಷಿ | 1144 | 1204 | 1984 | 2044 | ರಕ್ತಾಕ್ಷಿ | 58 |
| 59. | ಕ್ರೋಧನ | 1145 | 1205 | 1985 | 2045 | ಕ್ರೋಧನ | 59 |
| 60. | ಅಕ್ಷಯ | 1146 | 1206 | 1986 | 2046 | ಅಕ್ಷಯ | 60 |

# 2. ವಿಶ್ವಜ್ಯೋತಿ ಬಸವಣ್ಣನವರು

## (ಸಂಕ್ಷಿಪ್ತ ಚರಿತ್ರೆ)

ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವ ಬಸವಾ ಎಂಬುದೇ ಭಕ್ತಿ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ

*-ಶಿವಯೋಗಿ ಸಿದ್ಧರಾಮೇಶ್ವರರು*

ಕರ್ತನೆಂಬ ಕಲಾವಿದ ಮನುಕುಲದ ಇತಿಹಾಸವೆಂಬ ಭಿತ್ತಿಯ ಮೇಲೆ ತನ್ನ ಕಾರುಣ್ಯ ಕುಂಚದಿಂದ ಬಿಡಿಸಿದ ಅಪ್ರತಿಮ ಚಿತ್ರ ವಿಶ್ವಗುರು ಬಸವಣ್ಣನವರು. ಸರ್ವಗುಣ ಸಂಪನ್ನರಾದ, ಸಕಲಜನ ವಂದ್ಯರಾದ, ದಯೆ-ಮಾನವೀಯತೆ - ಧೀಮಂತಿಕೆಯ ತ್ರಿಕೂಟವಾದ ಬಸವಣ್ಣನವರು ಪರವಸ್ತುವಿನ ಚಿತ್ಕಳೆಯಾಗಿ, ಶರಣರ ಮನೋಮಧ್ಯದ ಸ್ವಯಂ ಜ್ಯೋತಿಯಾಗಿ ಬಾಳಿ ಬೆಳಗಿದರು.

ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಕಮ್ಮೆ ಕುಲದ ಶೈವ ಬ್ರಾಹ್ಮಣ ದಂಪತಿಗಳಾದ ಮಾದರಸ ಮತ್ತು ಮಾದಲಾಂಬಿಕೆಯ ಗರ್ಭದಲ್ಲಿ ಆನಂದನಾಮ ಸಂವತ್ಸರದ (ಕ್ರಿ.ಶ. 1134) ವೈಶಾಖಮಾಸದ ಅಕ್ಷಯ ತೃತೀಯಾದಂದು ವಿಶ್ವ ಗುರು ಬಸವಣ್ಣನವರು ಜನಿಸಿದರು. ಅವರು ಹುಟ್ಟಿದಾಗ ಒಂದು ವಿಶೇಷ ಘಟನೆಯು ಜರುಗಿತು. ತಾಯಿಯ ಗರ್ಭಾಂಬುಧಿಯಿಂದ ಜನಿಸಿ ಹೊರಗಿನ ಜಗತ್ತಿಗೆ ಮಗುವು ಪ್ರವೇಶಿಸಿತು. ಆದರೇನಂತೆ ಕಣ್ಣು ತೆರೆಯದೆ, ಅಳದೆ ಮಿಸುಕದೆ ಇರಲು ಹೆತ್ತವರು ಚಿಂತಾಕ್ರಾಂತರಾದರು. ಅದೇ ವೇಳೆಗೆ ಮನೆಯ ಮುಂದೆ ಮಂತ್ರದ ಘೋಷವಾಯಿತು. ಕೂಡಲ ಸಂಗಮ ಕ್ಷೇತ್ರದ ಅಧಿಪತಿಗಳಾಗಿದ್ದ ಜಾತವೇದ ಮುನಿಗಳು, ಒಂದು ವಿಶೇಷ ಚಿತ್ಕಳೆಯು ಇಳೆಗಿಳಿದ ಅನುಭವ ಪಡೆದು ತ್ವರೆಯಿಂದ ಧಾವಿಸಿದ್ದರು. ಗೌರವಪೂರ್ಣವಾಗಿ, ಪಾದಕ್ಕೆ ನೀರೆರೆದು ಬರಮಾಡಿಕೊಂಡ ಮಾದರಸರ ಮನೆಯನ್ನು ಹೊಕ್ಕು ಆ ಮುನಿಪುಂಗವರು ಮಗುವಿನ ಹಣೆಗೆ ವಿಭೂತಿಯನ್ನು ಧರಿಸಿ, ತಲೆಯ ಮೇಲೆ ಕೈಯಿಟ್ಟು **"ಓಂ ನಮಃ ಶಿವಾಯ "** ಎಂಬ ಮಂತ್ರದ ಉಚ್ಚಾರ ಮಾಡುತ್ತಲೇ ಮಗುವು ಕಣ್ತೆರೆಯಿತು. ಗುರುದರ್ಶನ ಪಡೆದು ಪುಳಕಿತಗೊಂಡಿತು. ಗುರುಗಳು ಆಶೀರ್ವದಿಸಿ, ಬಸವನೆಂದು ಹೆಸರಿಡಲು ಹೇಳಿ ನಿರ್ಗಮಿಸಿದರು.

ಬಿದಿಗೆಯ ಚಂದ್ರನಂತೆ ಬೆಳೆದ ಬಸವರಸ ಅಸಾಮಾನ್ಯ ಬುದ್ಧಿಶಾಲಿ, ತೀಕ್ಷ್ಣಮತಿ. ಗಳಿಗೆ ಗಳಿಗೆಗೂ ಸರ್ವಾಂಗೀಣವಾಗಿ ಬೆಳೆದನು. ಅಪಾರ ಸಾಹಸಿಯೂ



ಆಗಿದ್ದ ಬಸವರಸ ಸಣ್ಣವನಿರುವಾಗಲೇ ಕಾಲುಜಾರಿ ಕೊಳದಲ್ಲಿ ಬಿದ್ದ ಸಹಪಾಠಿ ಚಾಮನನ್ನು ಈಜಿ ಮೇಲಕ್ಕೆತ್ತಿ ತಂದು, ಪ್ರಾಣವನ್ನು ಉಳಿಸಿ ಊರವರ ಪ್ರಶಂಸೆಗೆ ಪಾತ್ರನಾಗಿದ್ದನು.

ಜನ್ಮತಃ ತೀಕ್ಷ್ಣಮತಿಯಾಗಿದ್ದ ಬಸವರಸನು ಪ್ರಚಲಿತವಿದ್ದ ಅನೇಕ ಸಂಪ್ರದಾಯ, ಆಚಾರ ವಿಚಾರಗಳನ್ನು ದಿಟ್ಟತನದಿಂದ ಪ್ರಶ್ನಿಸುತ್ತಿದ್ದನು. ಅನೇಕ ದೇವತೆಗಳ ಉಪಾಸನೆ, ಸೂರ್ಯ-ಚಂದ್ರ, ಅಗ್ನಿ-ನೀರು ಮುಂತಾದ ಭೌತಿಕ ವಸ್ತುಗಳ ಆರಾಧನೆ ಆತನಿಗೆ ಸರಿ ತೋರಲಿಲ್ಲ. ಯಜ್ಞ -ಯಾಗಾದಿಗಳ ನೆಪದಲ್ಲಿ ತುಪ್ಪ-ಪೀತಾಂಬರಗಳನ್ನು ಸುಡುವುದು, ಆಡು-ಅಶ್ವಗಳನ್ನು ಬಲಿಕೊಡುವುದನ್ನು ಕಂಡು ಮಮ್ಮಲ ಮರುಗಿದನು. ಒಮ್ಮೆ ಅಂತಹ ಹೋತನನ್ನು ಬಲಿಕೊಡುವ ಪ್ರಸಂಗ ನೋಡಿ ಕಂಬನಿಗರೆದಿದ್ದನು. ಸ್ವಧರ್ಮ ಪಾಲನೆಯ ಅಂಗವಾಗಿ ಬಸವರಸ ಉಪನಯನ ಮಾಡಿಸಿಕೊಳ್ಳಬೇಕಾಗಿ ಬಂದಾಗ ಹೆತ್ತವರೊಡನೆ ವಿಚಾರ ಭಿನ್ನಾಭಿಪ್ರಾಯ ಬಂದು ಸ್ವಗೃಹವನ್ನು ತೊರೆದನು. ಜ್ಞಾನಾಕಾಂಕ್ಷಿಯಾಗಿ ಸುಪ್ರಸಿದ್ಧ ಶೈವ ಗುರುಕುಲವಿದ್ದ ಕೂಡಲ ಸಂಗಮ ಕ್ಷೇತ್ರಕ್ಕೆ ದುಂದುಭಿ ನಾಮ ಸಂವತ್ಸರ ಕ್ರಿ.ಶ. 1142 ರಲ್ಲಿ ಆಗಮಿಸಿದನು. ವಿದ್ಯಾಲಯದ ಕುಲಪತಿ ಶ್ರೀ ಜಾತವೇದ ಮುನಿಗಳು, ಅಪಾರ ಪ್ರತಿಭೆಯಿಂದ ಬೆಳಗುತ್ತಿದ್ದ ಬಸವರಸನನ್ನು ಕಾಣುತ್ತಲೇ "ಈತಂ ಕಾರಣಿಕನಾಗಲ್ ವೇಳ್ಕುಂ " ಎಂದು ಮನಗಂಡು ಬಾಲಕನಿಗೆ ಜ್ಞಾನ-ವಾತ್ಸಲ್ಯಗಳ ಧಾರೆಯನ್ನೆರೆದು ಪೋಷಿಸಿದರು.

ವಿಶ್ವಗುರು ಬಸವಣ್ಣನವರು ಅರ್ಚಕ ವೃತ್ತಿಗೈಯುತ್ತ ಶಾಸ್ತ್ರಾಧ್ಯಯನ ಮಾಡುತ್ತಿರುವಾಗಲೇ ಅವರ ಹೃನ್ಮಂದಿರದಲ್ಲಿ ಸ್ವತಂತ್ರವಾದ ಧರ್ಮವೊಂದರ ಕಲ್ಪನೆ ರೂಪುಗೊಂಡಿತು. ಸೃಷ್ಟಿಕರ್ತನಾದ, ಸರ್ವಶಕ್ತ ಸರ್ವಜ್ಞನಾದ ಪರಮಾತ್ಮನ ಏಕತ್ವ, ಸರ್ವೋತ್ತಮಿಕೆಯ ತಳಹದಿಯ ಮೇಲೆ ರೂಪುಗೊಂಡ ಈ ಧರ್ಮದ ರೂಪುರೇಷೆ ಕುರಿತು ಚಿಂತಿಸುತ್ತಿರುವಾಗಲೇ ವಿವಾಹದ ಪ್ರಸ್ತಾಪವು ಒದಗಿತು. 21 ವರ್ಷದ ಸುಂದರ ತರುಣ ಬಸವರಸನಿಗೆ ತಮ್ಮ ಏಕೈಕ ಪುತ್ರಿ ನೀಲಗಂಗಳನ್ನು ಕೊಟ್ಟು ವಿವಾಹ ಮಾಡಲು ಬಿಜ್ಜಳ ಮಹಾರಾಜನ ಪ್ರಧಾನಿ ಬಲದೇವರಸರು ಇಷ್ಟಪಟ್ಟರು. ವಿದ್ಯಾರ್ಜನೆಯ ಕೊನೆಯ ಘಟ್ಟದಲ್ಲಿದ್ದ ಬಸವರಸ ಬಲದೇವರಸರ ಸ್ವಂತ ತಂಗಿ ಮಾದಲಾಂಬಿಕೆಯ ಮಗನೇ ಆಗಿದ್ದುದು ವಿಶೇಷ ಕಾರಣವಾಗಿ, ಗುರುಗಳ ಮೂಲಕ ಬಲದೇವರಸರು ವಿಷಯಗಳನ್ನು ತಿಳಿಸಿದರು. ಸಂಸಾರ ಸಾಗರದಲ್ಲಿ ಇಳಿಯ ಬಯಸದ ಬಸವರಸ ಈ ಪ್ರಸ್ತಾಪದಿಂದ ತೀವ್ರವಾದ ಆಘಾತಕ್ಕೊಳಗಾಗಿ, ಧ್ಯಾನಾಸಕ್ತರಾಗಿ ಪರಿತಾಪ ಪಡುತ್ತಿರುವಾಗಲೇ ಸಂಗಮನಾಥನ ವಾಣಿ ಉಲಿಯಿತು:

"ಎಲೆ ಮಗನೆ, ಬಸವಣ್ಣ, ನಿನ್ನಿಂ ಮಹೀತಳದೊಳು ಮೆರೆದಪೆವು, ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಹೋಗು "ಎಂದು. ಮರುದಿನ ಮಿಂದು ಮಡಿಯುಟ್ಟು ಧ್ಯಾನಾಸಕ್ತರಾಗಿ ಕುಳಿತಿರುವಾಗಲೇ ಅವರಿಗೆ ಸಗುಣ ಸಾಕ್ಷಾತ್ಕಾರವಾಯಿತು.

ಸಾಕ್ಷಾತ್ ಪರಮಾತ್ಮನೇ ಅವರನ್ನು ಅನುಗ್ರಹಿಸಿದ . ಆಗಲೇ ಅವರ ಮನದಲ್ಲಿ ಪಿಂಡಾಂಡ ಬ್ರಹ್ಮಾಂಡಗಳ, ತನ್ಮೂಲಕ ಆತ್ಮ - ಪರಮಾತ್ಮರ ಸಂಯೋಜನೆಯ ಸಾಕಾರವಾದ ಇಷ್ಟಲಿಂಗ ತತ್ವವು ರೂಪುಗೊಂಡುದು. ಈ ಇಷ್ಟಲಿಂಗದ ಸೂತ್ರವನ್ನು ಹಿಡಿದೇ ಸ್ವತಂತ್ರ ಸಂವಿಧಾನದ ಲಿಂಗಾಯತ ಧರ್ಮದ ಕಲ್ಪನೆ ಮೈದಳೆಯಿತು. ಈ ನೂತನ ಪರಿಕಲ್ಪನೆಯು (Concept) ಮುಂದೆ ಕಲ್ಯಾಣದ ಕಾರ್ಯಕ್ಷೇತ್ರವನ್ನು ಬಸವಣ್ಣನವರು ಪ್ರವೇಶಿಸಿದಾಗ ಪ್ರಾಯೋಗಿಕ ರೂಪ ತಳೆಯಿತು. ಇಷ್ಟ ಲಿಂಗವು ಕೇವಲ ಭಕ್ತಿಸಾಧನೆಯ ಸಾಧನವಾಗದೆ, ಸಮಾಜವನ್ನು ಜಾತಿ, ವರ್ಗ, ವರ್ಣ, ಲಿಂಗ, ಭೇದಗಳಿಲ್ಲದೆ ಒಂದುಗೂಡಿಸುವ ಗಣಲಾಂಛನವೂ ಆಯಿತು. ಪರಮಾತ್ಮನ ಕೃಪೆಯನ್ನು ತಮ್ಮೊಳಗೆ ಅವತೀರ್ಣ ಮಾಡಿಕೊಂಡ ಬಸವರಸ ಇದೀಗ ಸಂಗನ ಬಸವಣ್ಣನಾದರು. ಸಂಗಮನ ಕರುಣೆಯೇ ಬೆನ್ನ ಬಲವಾಗಿ, ಅವನ ಧ್ಯಾನವನ್ನೇ ತಮ್ಮ ಸಂಗಡ ಮಹಾನ್ ಸಂಪತ್ತನ್ನಾಗಿ ಹೊತ್ತು ಮಂಗಳವಾಡಕ್ಕೆ ಶ್ರೀಮುಖ ಸಂವತ್ಸರ ಕ್ರಿ.ಶ. 1153ರಲ್ಲಿ ಬಂದರು. ಸೋದರ ಮಾವ ಬಲದೇವರಸರ ಮಗಳಾದ ನೀಲಗಂಗಾಂಬಿಕೆಯನ್ನು ವಿವಾಹವಾದರಲ್ಲದೆ, ಸ್ವಾರ್ಜಿತ ಧನವು ಅತ್ಯಂತ ಶ್ರೇಷ್ಠ ಎಂದು ಕಾಯಕವನ್ನು ಹೊಂದಬಯಸಿ, ಕರಣಿಕ ಕಾಯಕ ಕೈಗೊಂಡರು. ಕರಣಿಕ ಕಾಯಕದೊಡನೆ ಅರಮನೆಯನ್ನು ಪ್ರವೇಶಿಸಿದವರು ತಮ್ಮ ಅಸಾಮಾನ್ಯ ಪ್ರತಿಭೆ, ಪಾಂಡಿತ್ಯಗಳಿಂದ ದಿನದಿನಕ್ಕೂ ಮೇಲೇರಿದರು. ಚಾಲುಕ್ಯ ರಾಜ ತೈಲಪನು ಕಾಕತೀಯ ರಾಜ ಪ್ರೋಲನಿಗೆ (ಕ್ರಿ.ಶ.1155) ಸೋತು ತನ್ನ ಮಹಾಮಂಡಲೇಶ್ವರ ಬಿಜ್ಜಳನ ನೆರವು ಪಡೆಯಲು ಆರಂಭಿಸಿದನು. ಬಿಜ್ಜಳನು ಕ್ರಿ.ಶ 1155ರಿಂದ ನಿಧಾನವಾಗಿ ಬಲವರ್ಧನೆ ಮಾಡಿಕೊಳ್ಳುತ್ತ ಕಲ್ಯಾಣದಲ್ಲಿಯೇ ಇರತೊಡಗಿ ತನ್ನ ಆಡಳಿತವನ್ನೂ ಮಂಗಳವಾಡದಿಂದ ಕಲ್ಯಾಣಕ್ಕೆ ವರ್ಗಾಯಿಸತೊಡಗಿದನು. ಧರ್ಮಕರ್ತರಾದ ಶ್ರೀ ಗುರು ಬಸವಣ್ಣನವರು ಮಂಗಳವಾಡದಿಂದ ಕಲ್ಯಾಣಕ್ಕೆ ತಾವು ತಮ್ಮ ಕುಟುಂಬ ಪರಿವಾರ ಸಹಿತವಾಗಿ ಬಂದರು. ವಿಕ್ರಮನಾಮ ಸಂವತ್ಸರ ಶ್ರಾವಣಶುದ್ಧ ಪಂಚಮಿ ಸೋಮವಾರದ ದಿವಸ ಅರುಣೋದಯದ ಕಾಲದಲ್ಲಿ (ಕ್ರಿ.ಶ. 1160) ಬಸವಣ್ಣನವರು ಕಲ್ಯಾಣವನ್ನು ಪ್ರವೇಶಿಸಿದರು. ಇವರು ಮಂಗಳವಾಡಿಯಲ್ಲಿ ಸುಮಾರು 7ವರ್ಷ ಕಾಲ ಇದ್ದರು.

ಯಾರೂ ಓದಲಿಕ್ಕೆ ಸಾಧ್ಯವಾಗದೆ ಇದ್ದ ಪುರಾತನ ಸ್ವರ್ಣಪತ್ರವೊಂದನ್ನು ಓದಿ, ಸಿಂಹಾಸನದ ಅಡಿಯಲ್ಲಿದ್ದ ಅಪಾರ ನಿಧಿಯನ್ನು ಹೊರತೆಗೆದುಕೊಟ್ಟರು. ತೈಲಪನ ದುರಾಡಳಿತದಿಂದ ಬರಿದಾಗಿದ್ದ ಬೊಕ್ಕಸದ ಪರಿಸ್ಥಿತಿಯಿಂದ ಕಂಗಾಲಾಗಿದ್ದ ಬಿಜ್ಜಳನಿಗೆ ಈ ನಿಧಿಪ್ರಾಪ್ತಿ ಅಪಾರವಾದ ಆನಂದ ಆತ್ಮವಿಶ್ವಾಸಗಳನ್ನು ನೀಡಿತು. ಬಸವಣ್ಣನವರು ಭಂಡಾರಿಯ ಹುದ್ದೆಗೆ ಏರಿದರು. ರಾಜಕೀಯದಲ್ಲಿ ಅವರಿಗಿಂತಲೂ ಹಿರಿಯರಾದ ಕೊಂಡೆಯ ಮಂಚಣ್ಣ, ನಾರಣ ಕ್ರಮಿತ ಮುಂತಾದವರು ಮತ್ಸರ ಬುದ್ಧಿಯಿಂದ ಬಸವಣ್ಣನವರಿಂದ ಭಂಡಾರದ ದುರುಪಯೋಗವಾಗಿದೆ ಎಂದು



ಆರೋಪ ಹೊರಿಸಿದರು. ಬಸವಣ್ಣನವರು ಆಗಿಂದಾಗಲೇ ಭಂಡಾರವನ್ನು ತೆಗೆಯಿಸಿ, ಲೆಕ್ಕ ಮಾಡಿ, ಹಣವು ಸರಿಯಾಗಿರುವುದನ್ನು ತೋರಿಸಿದರಲ್ಲದೇ ಹಿಂದಿನ ಮಂತ್ರಿಗಳ ಆಳ್ವಿಕೆಯ ಕಾಲದಲ್ಲಿ ಇದ್ದುದಕ್ಕಿಂತಲೂ ಬೊಕ್ಕಸದ ಆದಾಯವು ನಾಲ್ಕಾರು ಪಟ್ಟು ವೃದ್ಧಿಯಾದುದನ್ನು ತೋರಿಸಿಕೊಟ್ಟಾಗ ಬಿಜ್ಜಳ ಮಹಾರಾಜ ಬೆಕ್ಕಸಬೆರಗಾದ. ಪ್ರಜೆಗಳಲ್ಲಿ ವರ್ಧಿಸಿದ್ದ ಕಾಯಕ ನಿಷ್ಠೆ, ದಾಸೋಹ ಪ್ರಜ್ಞೆ, ಪ್ರಾಮಾಣಿಕ ತೆರಿಗೆ ನೀಡುವಿಕೆಯಿಂದ ರಾಜಭಂಡಾರವು ತುಂಬಿತುಳುಕುತ್ತಿತ್ತು. ಆನಂದ ಭರಿತನಾದ ಬಿಜ್ಜಳನು ಅಲ್ಲಿಗಾಗಲೇ ಬಲದೇವ ಮಂತ್ರಿಯ ನಿಧನದಿಂದ ತೆರವಾಗಿದ್ದ ಪ್ರಧಾನಿಯ ಪದವಿಯನ್ನು ಕ್ರಿ.ಶ 1162ರಲ್ಲಿ ಬಸವಣ್ಣನವರಿಗೆ ವಹಿಸಿಕೊಟ್ಟನು. ಒದಗಿ ಬಂದ ಅಧಿಕಾರವು ಪರಮಾತ್ಮನ ಪ್ರಸಾದವೆಂಬಂತೆ ಕೈಂಕರ್ಯ ಭಾವದಿಂದ ಬಸವಣ್ಣನವರು ಸ್ವೀಕರಿಸಿದರು.

ಸಮಾಜದಲ್ಲಿ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಪರಿವರ್ತನೆ ಮಾಡಲು ಧರ್ಮಕರ್ತ ಬಸವಣ್ಣನವರು ಸಂಕಲ್ಪ ತೊಟ್ಟರು. ಇದರ ಫಲವಾಗಿ ತಾತ್ವಿಕ, ನೈತಿಕ, ಸೈದ್ಧಾಂತಿಕ. ಸಾಮಾಜಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಮೌಲ್ಯಗಳನ್ನೊಳಗೊಂಡ ಸಂವಿಧಾನವಾಗಿ ವಚನ ಸಾಹಿತ್ಯವು ಆವಿರ್ಭವಿಸಿತು. ಈ ತತ್ತ್ವಗಳನ್ನು ಪ್ರಯೋಗಿಸಿ ಸಮಾಜದಲ್ಲಿ ಪರಿವರ್ತನೆ ತರುವ ಉದ್ದೇಶದಿಂದ ಧರ್ಮಪಿತ ಬಸವಣ್ಣನವರು ಅನುಭವ ಮಂಟಪವನ್ನು ಕ್ರಿ.ಶ. 1169ರಲ್ಲಿ ವಿರೋಧಿನಾಮ ಸಂವತ್ಸರದಲ್ಲಿ ಸ್ಥಾಪಿಸಿದರು. ಅರ್ಚನೆ-ಅರ್ಪಣೆ (ಕಾಯಕ + ದಾಸೋಹ + ಪ್ರಸಾದ) - ಅನುಭಾವಗಳ ಹಕ್ಕುಗಳನ್ನು ಸಾರ್ವತ್ರಿಕಗೊಳಿಸಿ ಎಲ್ಲರಿಗೂ ನೀಡಿದರು. ಜಾತಿ - ವರ್ಣ - ವರ್ಗರಹಿತ ಧರ್ಮಸಹಿತ ಸಮಾಜವನ್ನು ಕಟ್ಟಲು ಎಲ್ಲ ಜಾತಿಮತಪಂಥಗಳಿಂದ ಸತ್ಯದ ಸಾಧಕರು, ಶೋಧಕರು ಅನುಭವ ಮಂಟಪದತ್ತ ಧಾವಿಸಿ ಬಂದರು.

ನಂದನನಾಮ ಸಂವತ್ಸರ ಕ್ರಿ.ಶ. 1172ರಲ್ಲಿ ಶಿವಸ್ವಾಮಿ ಮತ್ತು ಅಕ್ಕನಾಗಲಾಂಬಿಕೆಯ ಮಗನಾಗಿ ಚೆನ್ನ ಬಸವಣ್ಣ ಜನಿಸಿದರು. ಕ್ರೋಧಿನಾಮ ಸಂವತ್ಸರ ಕ್ರಿ.ಶ. 1184 ರಲ್ಲಿ ಅಲ್ಲಮಪ್ರಭು ಸಿದ್ಧರಾಮರು ಆಗಮಿಸಿದರು. ಜಾತಿಯಿಂದ ಗುರುತ್ವವು ಬರದು ಆತ್ಮಜ್ಯೋತಿಯಿಂದ ಮಾತ್ರ ಎಂಬುದನ್ನು ಘೋಷಿಸಿ ಬಸವಣ್ಣನವರು ಶೂನ್ಯಪೀಠವನ್ನು ಸ್ಥಾಪಿಸಿ, ವೀರವೈರಾಗ್ಯ ನಿಧಿ ಅಲ್ಲಮ ಪ್ರಭು ದೇವರನ್ನು ಪ್ರಥಮ ಶೂನ್ಯ ಪೀಠಾಧಿಕಾರಿಯನ್ನಾಗಿ ಮಾಡಿದರು. ವಿಶ್ವಾವಸು ಸಂವತ್ಸರದ ಚೈತ್ರ ಶುದ್ಧ ಪಾಡ್ಯ ಯುಗಾದಿ ದಿವಸ ಸೋಮವಾರದಂದು ರೇವತಿ ನಕ್ಷತ್ರದಲ್ಲಿ (ಕ್ರಿ.ಶ. 1185) ಶೂನ್ಯ ಪೀಠಾರೋಹಣವು ನೆರವೇರಿ ಅಲ್ಲಮ ಪ್ರಭು ದೇವರು ಅನುಭವ ಮಂಟಪದ ಸಚೇತಕ ಶಕ್ತಿಯಾದರು. ಲೋಹ ಚುಂಬಕದತ್ತ ಕಬ್ಬಿಣದ ಚೂರುಗಳು ಆಕರ್ಷಿಸಲ್ಪಡುವಂತೆ ವೀರವಿರಾಗಿಣಿ ಅಕ್ಕಮಹಾದೇವಿ, ಶಿವಯೋಗಿ ಸಿದ್ಧರಾಮೇಶ್ವರ, ಕಾಶ್ಮೀರದ ಅರಸು ಮೋಳಿಗೆಯ ಮಾರಯ್ಯ, ತತ್ತ್ವ

ನಿಷ್ಠುರಿ ಮಡಿವಾಳ ಮಾಚಯ್ಯ ಮುಂತಾದವರು ಆಕರ್ಷಿಸಲ್ಪಟ್ಟರು. ಅನುಭವ ಮಂಟಪದ ಜ್ಞಾನಶಕ್ತಿಯಾಗಿ ಚಿನ್ಮಯಜ್ಞಾನಿ ಚನ್ನಬಸವಣ್ಣ, ಇಚ್ಛಾಶಕ್ತಿಯಾಗಿ ವೀರಮಾತೆ ಅಕ್ಕನಾಗಲಾಂಬಿಕೆ, ಕ್ರಿಯಾಶಕ್ತಿಯಾಗಿ ಬಸವಣ್ಣನವರ ಧರ್ಮಪತ್ನಿ ನೀಲಾಂಬಿಕೆ ಬಸವಣ್ಣನವರ ಮಹಾನ್ ಕಾರ್ಯದಲ್ಲಿ ಹೆಗಲುಗೊಟ್ಟರು. ಹಡಪದ ಅಪ್ಪಣ್ಣ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಬ್ರಾಹ್ಮಣ ಮಧುವರಸ, ಸಮಗಾರ ಹರಳಯ್ಯ, ಕಿನ್ನರಿಯ ಬ್ರಹ್ಮಯ್ಯ, ಅಂಬಿಗರ ಚೌಡಯ್ಯ, ಒಕ್ಕಲಿಗ ಮುದ್ದಣ್ಣ ತುರುಗಾಹಿ ರಾಮಣ್ಣ ಮುಂತಾದ ಅಸಂಖ್ಯಾತ ಜಂಗಮ ಪುಂಗವರಿಂದ ಅನುಭವ ಮಂಟಪವು ವಿಜೃಂಭಿಸಿತು. ಅಲ್ಲಮ ಪ್ರಭುಗಳು ವಿಶ್ವಾವಸು ಸಂವತ್ಸರ (ಕ್ರಿ. ಶ. 1185) ರಿಂದ ರಾಕ್ಷಸನಾಮ ಸಂವತ್ಸರ (ಕ್ರಿ. ಶ. 1195)ರ ವರೆಗೆ ಮಾರ್ಗ ದರ್ಶನ ಮಾಡಿ, ರಾಕ್ಷಸನಾಮ ಸಂವತ್ಸರ ಕಾರ್ತಿಕ ಶುದ್ಧ ಪಂಚಮಿಯಂದು ಚನ್ನ ಬಸವಣ್ಣನವರಿಗೆ ಅಧಿಕಾರ ಹಸ್ತಾಂತರಿಸಿದರು.

ಸಂಸ್ಕಾರ, ಸಂಘಟನೆ, ಸಮಾನತೆ, ಸಹೋದರತ್ವ ಎಂಬ ನಾಲ್ಕು ಮಹಾನ್ ಸೂತ್ರಗಳೊಡನೆ ಕಾರ್ಯಪ್ರವೃತ್ತವಾದ ಅನುಭವ ಮಂಟಪವು, ''ಜಾತಿಗಳು ಮಾನವ ಕಲ್ಪಿತವೇ ವಿನಾ ದೇವ ನಿರ್ಮಿತವಲ್ಲ. ದೇವರನ್ನು ಆರಾಧಿಸುವ ಹಕ್ಕು ಎಲ್ಲರಿಗೂ ಇದೆ. ದೀಕ್ಷಾವಂತರಾದವರಲ್ಲಿ ಉಂಬುವ- ಉಡುವ ಶಿವಾಚಾರ ಕೊಂಬ-ಕೊಡುವ ಕುಲಾಚಾರ ಎರಡೂ ನಡೆಯಬೇಕು'' ಎಂಬ ಸೂತ್ರವನ್ನಾಧರಿಸಿ ಲಿಂಗವಂತ ಧರ್ಮವನ್ನು ಸ್ವೀಕಾರ ಮಾಡಿದ್ದ, ಹುಟ್ಟಿನಿಂದ ಬ್ರಾಹ್ಮಣನಾಗಿದ್ದ ಮಂತ್ರಿ ಮಧುವರಸರ ಮಗಳು ಲಾವಣ್ಯವತಿಯನ್ನು ಹುಟ್ಟಿನಿಂದ ಅಂತ್ಯಜನೆನಿಸಿಕೊಂಡಿದ್ದ ಹರಳಯ್ಯನವರ ಮಗ ಶೀಲವಂತನಿಗೆ ಕೊಟ್ಟು ವಿವಾಹ ಮಾಡಿಸಿತು. ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ಅನುಭವ ಮಂಟಪವು ನಡೆಸಿದ ಈ ವಿವಾಹವು ಸಂಪ್ರದಾಯವಾದಿಗಳನ್ನು ಕೆಂಗೆಡಿಸಿತು. ಬಸವಣ್ಣನವರ ಅಗಾಧ ಯೋಜನೆ, ಸಮಾಜದಲ್ಲಿ ತರುತ್ತಿದ್ದ ಅಪೂರ್ವ ಪರಿವರ್ತನೆಗಳನ್ನು ಕಂಡು ಒಳಗೇ ತಳಮಳಿಸುತ್ತಿದ್ದ ಸಂಪ್ರದಾಯವಾದಿಗಳು ವರ್ಣಾಂತರ ವಿವಾಹದ ನೆಪದಲ್ಲಿ ಸಿಡಿದೆದ್ದರು. ಶಾಸ್ತ್ರವಿರುದ್ಧವಾದ ವರ್ಣಸಂಕರ ವಿದೆಂದು ಆರೋಪಿಸಿದರು. ಸ್ವತಂತ್ರ ವಿಚಾರಿಯಲ್ಲದ ಬಿಜ್ಜಳನನ್ನು ಪ್ರಚೋದಿಸಿ, ಬಸವಣ್ಣನವರಿಗೆ, ಗಡಿಪಾರಿನ ದಂಡವನ್ನು ವಿಧಿಸುವಂತೆ ಮಾಡಿದರು. ಹೊಕ್ಕರೆ ಅಣೆ ಎಂದು ಎರಡು ಹದ್ದು (ಗಡಿ)ಗಳನ್ನು ಗುರುತಿಸಲಾಯಿತು. ಅಂದು ರಾತ್ರಿ ಕಳೆದು ಬೆಳಗಾಗುವುದರೊಳಗೆ ಒಂದು ಗಡಿಯನ್ನು ದಾಟಬೇಕೆಂದು, ಹೊರ ಗಡಿಯನ್ನು * ದಾಟಿ ಒಳಗೆ ಪ್ರವೇಶಿಸಬಾರದೆಂದು ಆಜ್ಞೆ ವಿಧಿಸಲಾಯಿತು. ರಾಜಾಜ್ಞೆಯನ್ನು ಸ್ವೀಕರಿಸಿ 'ದಂಡಗೊಂಡ ಬಸವಣ್ಣನವರು ' ಫಾಲ್ಗುಣ ಮಾಸದ ದ್ವಾದಶಿ ಸೋಮವಾರ ದಂದು ರಾಕ್ಷಸನಾಮ ಸಂವತ್ಸರದಲ್ಲಿ (ಕ್ರಿ.ಶ.1196) ಕಲ್ಯಾಣ ದಿಂದ ನಿರ್ಗಮಿಸಿದರು. ಮರುದಿವಸ ತ್ರಯೋದಶಿ, ಅಂದು ಹರಳಯ್ಯ

*ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಹೊಕ್ರಾಣೆ* ಬಿಜಾಪುರ ಜಿಲ್ಲೆ ಹೊಕ್ರಾಣೆ



ಮಧುವರಸ - ಶೀಲವಂತರ ಬಂಧನ , ಕ್ಷಿಪ್ರ ವಿಚಾರಣೆ ನಡೆಯಿತು. ಧರ್ಮಶಾಸ್ತ್ರಗಳು ದೇವರ ಕಣ್ಣುಗಳಂತೆ ಅವನ್ನು ಉಲ್ಲಂಘಿಸಿದ್ದರಿಂದ ಕಣ್ಣುಗಳನ್ನು ಕೀಳಿಸಬೇಕೆಂದು ಘೋಷಿಸಿ, ಶಾಸ್ತ್ರವಿರೋಧಿ ವರ್ಣಾಂತರ ವಿವಾಹಕ್ಕಾಗಿ ಎಳೆಹೂಟೆ ಶಿಕ್ಷೆ ವಿಧಿಸಿ ಚತುರ್ದಶಿಯಂದು ಮೂವರು ಶರಣರ ಕಣ್ಣುಗಳನ್ನು ಕೀಳಿಸಿ ಆನೆಯ ಕಾಲಿಗೆ ಕಟ್ಟಿ ಎಳೆಸಲಾಯಿತು. ಈ ಕ್ರಾಂತಿಕಾರಿ ಮದುವೆಗೆ ಪ್ರೇರಣೆ ನೀಡಿದ ಸಹಸ್ರಾರು ಶರಣರ ವಧೆ ಮಾಡಲಾಯಿತು. ಬಿಜ್ಜಳನ ಅನ್ಯಾಯದ ವಿರುದ್ಧ ಸಿಡಿದೆದ್ದ ಶರಣರು-ಜನ ಸಾಮಾನ್ಯರು - ಸೈನಿಕರ ನಡುವೆ ಘರ್ಷಣೆಯು ನಗರದಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬಿತು.

ಮಧುವರಸ ಹರಳಯ್ಯ ಹೋದ ದಿನ ಶಿವನಡಿಗೆ
ಬೀದಿಬೀದಿಗಳು ಕಿಡಿಕಾರಿ। ಕಲ್ಯಾಣ
ಗಾದಿ ಹೌಹಾರಿ ತಳಮಳಿಸಿ ॥ (ಮ. ಮಾ. 83)

ಚಾಲುಕ್ಯ ನಿಷ್ಠ ಸಾಮಂತರಾಗಿ ಬಿಜ್ಜಳನಿಂದ ಕಾರಾಗೃಹದಲ್ಲಿ ಬಂಧಿತರಾಗಿದ್ದ ಜಗದೇವ, ಮಲ್ಲಿದೇವ ಬೊಮ್ಮಣ್ಣ * ಎಂಬುವವರು ಇದೇ ಸಮಯದಲ್ಲಿ ತಪ್ಪಿಸಿಕೊಂಡು ಬಂದು ಬಿಜ್ಜಳನ ಅರಮನೆಯನ್ನು ದೀವಟಿಗೆಯವರ ವೇಷದಲ್ಲಿ ಹೊಕ್ಕು ಮತಿಭ್ರಾಂತನಾಗಿ ಕುಳಿತಿದ್ದ ಆತನನ್ನು ತಿವಿದು ಕೊಂದರು. ಫಾಲ್ಗುಣ ಮಾಸ (ಹೋಳಿ) ಹುಣ್ಣಿಮೆಯಂದು ಬಿಜ್ಜಳನ ವಧೆಯಾಗುತ್ತಲೇ ನಿಯಂತ್ರಿಸುವವರಿಲ್ಲದೆ ನಗರದಲ್ಲಿ ಅಸ್ತವ್ಯಸ್ತತೆಯುಂಟಾಗಿ ಸಂಪ್ರದಾಯವಾದಿಗಳು ಶರಣರ ಮೇಲೆ ಸೇಡುತೀರಿಸಿಕೊಳ್ಳಲು ಸಿದ್ಧರಾದರು. ಶರಣರ ಜೀವಕ್ಕಿಂತಲೂ ವಚನ ಸಾಹಿತ್ಯ ನಾಶವು ಅವರ ಪ್ರಮುಖ ಗುರಿಯಾಗಿದ್ದಂತೆ ಶರಣರಿಗೆ ತಮ್ಮ ಪ್ರಾಣರಕ್ಷಣೆಗಿಂತಲೂ ವಚನ ಸಾಹಿತ್ಯ ಸಂರಕ್ಷಣೆ ಮುಖ್ಯವಾಗಿತ್ತು. ಚನ್ನಬಸವಣ್ಣ- ಮಡಿವಾಳ ಮಾಚಿದೇವ- ಅಕ್ಕನಾಗಲಾಂಬಿಕೆ ಅವರ ನೇತೃತ್ವದಲ್ಲಿ ಶರಣರ ಬೃಹತ್ ಸಮೂಹವು ವಚನ ಸಾಹಿತ್ಯ ಹೊತ್ತು ಸಹ್ಯಾದ್ರಿಯತ್ತ ಮುನ್ನಡೆಯಿತು. ಈ ಶರಣ ಸಮೂಹವು ತಮ್ಮನ್ನು ಎದುರಿಸಿದ ಸೈನ್ಯವನ್ನು ಮೊದಲು ಕಾದರವಳ್ಳಿಯ ಬಳಿ ಎದುರಿಸಿತು. ಮೊದಲ ಕಾಳಗದಲ್ಲಿ ಶರಣರಿಗೆ ಬಹಳ ಕಷ್ಟ-ನಷ್ಟ

★ ಜಗದೇವ ಮಲ್ಲಿಬೊಮ್ಮ ಎಂಬ ಇಬ್ಬರು ಬಿಜ್ಜಳನನ್ನು ವಧಿಸಿದರು ಎಂದು ಕೆಲವರು ಹೇಳಿದರೆ, ಜಗದೇವ, ಮಲ್ಲಿದೇವ, ಬೊಮ್ಮಣ್ಣ ಎಂಬ ಮೂವರು ವಧಿಸಿದರು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಶ್ರೀ ಬಸವೇಶ್ವರ ಕಮೆಮೊರೇಶನ್ ಗ್ರಂಥದಲ್ಲಿ ಡಾ. ಆರ್. ಸಿ. ಹಿರೇಮಠರು ಹೀಗೆ ಬರೆಯುತ್ತಾರೆ. ಬಿಜ್ಜಳನವಿರುದ್ಧ ಬಂಡೆದ್ದ ಜಗದೇವ ದಣ್ಣಾಯಕನನ್ನು ಬಿಜ್ಜಳನ ಸೈನ್ಯವು ಮರ್ದಿಸಿತು. ಚಾಲುಕ್ಯ ನಿಷ್ಠನಾದ ಈತ ಬಿಜ್ಜಳನ ವಿರೋಧಿಯಾಗಿದ್ದ ಮತ್ತು ಶಾಂತರ ವಂಶದವನು ಎಂದು ಮರಡೀಪುರ ಶಾಸನದಲ್ಲಿ ಬರೆಯಲಾಗಿದೆ. ಕೊಂಡಾಪುರಶಾಸನದಲ್ಲಿ ಗುಟ್ಟರಸ ಸಂತತಿಯ ಮಲ್ಲಿದೇವ ಎಂಬಾತನನ್ನು ಬಿಜ್ಜಗ ಶಿರಚ್ಛೇದಕ ಎಂದುವರ್ಣಿಸಲಾಗಿದೆ. ಇವನೂ ಸಹ ಚಾಲುಕ್ಯ ನಿಷ್ಠ ಸಾಮಂತ. ಕೋರಗಲ್ ವಂಶದ ಕುಮಾರ ಬೊಮ್ಮಯ್ಯ, ಅಂದರೆ ಬೊಮ್ಮಣ್ಣನು ಚಾಲುಕ್ಯರಾಜ್ಯಪ್ರತಿಷ್ಠಾಪಕ ಎಂಬ ಬಿರುದು ಹೊಂದಿದ್ದಾನೆ. ಈ ಮೂವರು ಬಿಜ್ಜಳನಹಂತಕರು ಎಂದು ಡಾ. ಆರ್. ಸಿ. ಹಿರೇಮಠರು ಉಲ್ಲೇಖಿಸಿದ್ದಾರೆ (ಪುಟ 30)

ಉಂಟಾದವು. ನಂತರ ಸ್ಥಳೀಯ ಜನರು ಕ್ರೋಢೀಕರಣಗೊಳ್ಳುತ್ತ ಹೋದಂತೆ ಶರಣರ ಬಲವು ಹಿರಿದಾಗಿ ಮುರುಗೋಡದಲ್ಲಿ ನಡೆದ ಕಾಳಗದಲ್ಲಿ ಜಯವು ಶರಣರಿಗೆ ಒಲಿಯಿತು. ಚನ್ನಬಸವಣ್ಣನವರು ಉಳಿವೆಯಲ್ಲಿ ಪಾದವಿಟ್ಟು ಬೀಡುಬಿಟ್ಟುದು ನಳನಾಮ ಸಂವತ್ಸರದ ವೈಶಾಖ ಬಹುಳ ಬಿದಿಗೆ ಬುಧವಾರ ರೋಹಿಣಿ ನಕ್ಷತ್ರದಲ್ಲಿ. ಅವರ ಜೊತೆಗೆ ಸುಮಾರು 12,000 ಶರಣರ ಸಮೂಹವಿತ್ತು.

ಇತ್ತ 'ದಂಡಗೊಂಡ ಬಸವಣ್ಣನವರು ಗುರುತಿಸಿದ್ದ ಗಡಿಯನ್ನು ದಾಟಿ ಕೂಡಲ ಸಂಗಮದತ್ತ ಬಂದು ಅಂತರ್ಮುಖಿಗಳಾಗಿ ತಪೋಮಗ್ನರಾದರು. ನಳನಾಮ ಸಂವತ್ಸರದ ಶ್ರಾವಣಶುದ್ಧ ಪಂಚಮಿ ಮಂಗಳವಾರದಂದು ಸುಪ್ರಭಾತದ ಪೂಜೆಯಲ್ಲಿ ಧರ್ಮಪಿತರು ತನ್ಮಯರಾಗಿ ಇರುವಾಗಲೇ ''ಮರ್ತ್ಯಕ್ಕೆ ಬಂದ ಮಣಿಹ ಪೂರೈಸಿತು. ಇನ್ನು ನನ್ನಲ್ಲಿ ಒಂದಾಗು'' ಎಂಬ ದೇವನ ಆದೇಶ ಕೇಳಿ ಬಂದಿತು. ಕಾಯ -ಜೀವಗಳ ಹೊಲಿಗೆಯನ್ನು ಬಿಚ್ಚಿಕೊಂಡು ಜೀವನ್ಮುಕ್ತ ಮನಃಸ್ಥಿತಿಯಲ್ಲಿದ್ದ ಬಸವಣ್ಣನವರು 'ಇಚ್ಛಾಮರಣ' ದ ಸಂಕಲ್ಪದೊಡನೆ ಯೋಗ ತಂತ್ರದ ಮೂಲಕ ದೇಹ- ಆತ್ಮಗಳನ್ನು ಬೇರ್ಪಡಿಸಲು ನಿರ್ಧರಿಸಿದರು. ಯೋಗದ ತಂತ್ರದ ಮೂಲಕ ಸುಪ್ರಭಾತದಲ್ಲಿ ಆರಂಭವಾದ ಈ ಕ್ರಿಯೆ ಸೂರ್ಯೋದಯವಾದ 28ಗಳಿಗೆಗೆ ಅಂದರೆ ಸೂರ್ಯಾಸ್ತಕ್ಕೂ ಸ್ವಲ್ಪ ಮೊದಲು ಪೂರ್ಣಗೊಂಡಿತು. ಅವರ ಮುಖವು ದೇದೀಪ್ಯಮಾನವಾಗಿ ಬೆಳಗಲು ಪಶ್ಚಿಮ ಚಕ್ರದ ಕವಾಟ ತೆರೆದು ಆತ್ಮವನ್ನು ಬಿಡುಗಡೆ ಮಾಡಿ ಪರಮಾತ್ಮ ಚೈತನ್ಯದಲ್ಲಿ ವಿಲೀನಗೊಳಿಸಿದರು. ಉರಿಯುಂಡ ಕರ್ಪುರದಂತೆ ದೇವನಲ್ಲಿ ಒಂದಾದರು, ಬಯಲಲ್ಲಿ ಬಯಲಾದರು. ವಿಶ್ವಗುರು ಬಸವಣ್ಣನವರು ಇಳೆಯನ್ನಗಲಿದ ನೂರಾರು ವರ್ಷಗಳಿಂದಲೂ ಆ ದಿನವು ಬಸವ ಪಂಚಮಿ ಎಂದು ಕೀರ್ತಿಯನ್ನು ಹೊಂದಿದೆ.

ಹೀಗೆ ಆನಂದನಾಮ ಸಂವತ್ಸರದ ವೈಶಾಖ ಶುದ್ಧ ಅಕ್ಷಯ ತೃತೀಯಾದಂದು ಜನ್ಮ ತಳೆದು ಬಂದ ಬಸವಣ್ಣನವರು (ಕ್ರಿ.ಶ. 1134) ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳವಾರದಂದು (ಕ್ರಿ.ಶ. 1196) ಲಿಂಗೈಕ್ಯರಾದರು. ಸುಮಾರು 62 ವರ್ಷ 3 ತಿಂಗಳು 2 ದಿವಸಗಳ ಕಾಲ ಈ ಮರ್ತ್ಯಲೋಕದಲ್ಲಿ ಮೃಣ್ಮಯ ಶರೀರ ಧಾರಿಗಳಾಗಿ ಇದ್ದು, ಜಗ ಬದುಕುವ ಅಮೂಲ್ಯ ಸಂದೇಶಗಳನ್ನು ತಮ್ಮ ವಚನಗಳ ಮೂಲಕ ನೀಡಿ ಅಮರರಾಗಿದ್ದಾರೆ.

***

ಕಪಿಲ ಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಸಂಗನ ಬಸವಣ್ಣ ಬಂದು
ಮರ್ತ್ಯದಲ್ಲಿ ಮಹಾಮನೆಯ ಕಟ್ಟದರೆ
ಮರ್ತ್ಯ ಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು

- ಶಿವಯೋಗಿ ಸಿದ್ಧರಾಮೇಶ್ವರರು



# 3. ಕಾಲಜ್ಞಾನ ವಚನಗಳ ಆಧಾರದ ಮೇಲೆ ಭೂತ-ಭವಿಷ್ಯತ್ ನಿರ್ಣಯ

ದೈವಿಕ ದೃಷ್ಟಿಯಿಂದ ಕೆಲವೊಂದು ವಿಚಾರಗಳನ್ನು ಅಂತರ್ ಪ್ರೇರಣೆಯಂತೆ, ಹೇಳಲು ಬಯಸುತ್ತೇನೆ. ಇದು ತಾರ್ಕಿಕ ಮತ್ತು ಶಾಸ್ತ್ರೀಯ ಆಧಾರವಲ್ಲವಾದರೂ, ಶಾಸ್ತ್ರ-ತರ್ಕಕ್ಕತೀತವಾದ ಅಂತಃಸ್ಫುರಣದ ಧ್ವನಿಯಾದ್ದರಿಂದ ನಾವು ಮನಃಪೂರ್ವಕವಾಗಿ ಪರಿಗಣಿಸಬೇಕಾಗುವುದು.

ಬಸವ ಪೀಠವು ಎದ್ದು, ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು! ಧರೆಯವರೆಗೆ
ವಶವಾಗದಿಹುದೇ ಸರ್ವಜ್ಞ?

ರೆ॥ ಉತ್ತಂಗಿ ಚೆನ್ನಪ್ಪನವರು ಪ್ರಕಟಿಸಿರುವ ಸರ್ವಜ್ಞನ ತ್ರಿಪದಿಗಳಲ್ಲಿ ಇದೂ ಒಂದು.

ಶರಣರಿಂದ ಕಾಲಜ್ಞಾನ ವಚನಗಳು ವಿಪುಲವಾಗಿ ಬರೆಯಲ್ಪಟ್ಟಿವೆ. ಅವುಗಳನ್ನು ವಿಶ್ಲೇಷಿಸುತ್ತ ಹೋದರೆ ಕೆಲವು ಇತಿಹಾಸದ ನಿರೂಪಣೆಯಾಗಿ ಕಂಡರೆ ಮತ್ತೆ ಕೆಲವು ಭವಿಷ್ಯವಾಣಿಯಾಗಿ ತೋರುತ್ತವೆ. ಅಂದಿನ ಕಾಲದಲ್ಲಿ ವಾರ್ತಾ ಪತ್ರಿಕೆಗಳಂತಹ ಸಾಮೂಹಿಕ ಪ್ರಸಾರ ಮಾಧ್ಯಮಗಳಿಲ್ಲದಾಗ ಬಾಯಿಂದ ಬಾಯಿಗೆ ಸುದ್ದಿಯು ಸಾಗಬೇಕಿತ್ತು. ಕಲ್ಯಾಣದಲ್ಲಿ ನಡೆದ ಅನೇಕ ಪ್ರಸಂಗ, ಬಸವಣ್ಣನವರ ಚರಿತ್ರೆ ಮುಂತಾದುವನ್ನು ಈ ಕಾಲಜ್ಞಾನ ವಚನಗಳು ಹೇಳುತ್ತ ಇತಿಹಾಸದ ದಾಖಲೆಗಳಾದರೆ, ಕೆಲವು ಆದಿ ಶರಣರು ತಮ್ಮ ಅನಿಸಿಕೆಗಳನ್ನು, ಸಂಕಲ್ಪವನ್ನು, ಮುಂದೆ ಆಗಬಹುದಾದ ಭವಿಷ್ಯದ ಘಟನೆಗಳನ್ನೂ ಕಾಲಜ್ಞಾನ ವಚನಗಳ ರೂಪದಲ್ಲಿ ಹೇಳುತ್ತಾ ಹೋಗಿದ್ದಾರೆ.

ಲಿಂಗಯೋಗ ಸಾಧನೆಯಲ್ಲಿ ತೊಡಗಿ, ಆಳವಾದ ದಿವ್ಯಾನುಭವದಲ್ಲಿ ತಲ್ಲೀನರಾದಾಗ ಅವರ ಮನವು ಘನಮನವಾಗಿ, ಉನ್ಮನವಾಗಿ ದೇಶ ಕಾಲಾತೀತ (beyond time and space)ವಾಗಿ ಅನುಭವಗಳನ್ನು ಗ್ರಹಿಸುವುದು. ಇಂಥ ಅನುಭವಗಳನ್ನು ಅವರು ವಚನ ರೂಪದಲ್ಲಿ ಬರೆದಿಟ್ಟಿದ್ದಾರೆ.

ಕ್ರೈಸ್ತ ಧರ್ಮದಲ್ಲಿ ಸುವಾರ್ತಾ ಪ್ರಸಾರಕರು ಏಸುಕ್ರಿಸ್ತನ ಜೀವನ-ಬೋಧನೆಗಳನ್ನು ಹೇಳುತ್ತಾ ಹೋದಂತೆ, ಕಾಲಜ್ಞಾನವನ್ನು ಸಾರುವ ಅಯ್ಯನವರುಗಳು ಅನೇಕ ಸಂಗತಿಗಳನ್ನು ಸಾರುತ್ತಾ ಬಂದಿದ್ದಾರೆ. ನಮ್ಮಲ್ಲಿ ಈ

ಕಾಲಜ್ಞಾನ ವಚನಗಳನ್ನು ಸಂಗ್ರಹಿಸುವ, ಅವನ್ನು ಅಧ್ಯಯನಿಸುವ, ಅರ್ಥೈಸುವ ಪರಿಪಾಠ ಬೆಳೆದು ಬರಲಿಲ್ಲ. ಎಲ್ಲದರ ಬಗ್ಗೆಯೂ ಉದಾಸೀನ ತೋರುವ ಈ ಜನ ಆ ಬಗ್ಗೆಯೂ ತೋರಿದರು. ಮೇಲಾಗಿ ಸಾರುವ ಅಯ್ಯನವರುಗಳು ಅವಿದ್ಯಾವಂತರು, ಸಾಹಿತ್ಯ ಜ್ಞಾನ ಇಲ್ಲದವರೂ ಆಗಿ ತಪ್ಪು ತಪ್ಪಾಗಿ ಹೇಳವುದಲ್ಲದೆ, ಆದಿ ಶರಣರ ಕಾಲಜ್ಞಾನದೊಡನೆ ತಮ್ಮ ಮನಸ್ಸಿಗೆ ಬಂದಂತೆ ಸೇರಿಸುತ್ತ ಇನ್ನಷ್ಟು ಇವುಗಳ ಮಹತ್ವ ಕಳೆದು ಬಿಟ್ಟರು.

ನನಗೊಂದು ಸರ್ವಪುರಾತನರ ಕಾಲಜ್ಞಾನ ಎಂಬ ಪುಸ್ತಕ ದೊರೆಯಿತು. ಶ್ರೀ ಶಿವರುದ್ರ ಸ್ವಾಮಿಗಳು ಸಾಲಿಮಠ ಎಂಬುವವರು ಅದರ ಸಂಗ್ರಹಕಾರರಾಗಿದ್ದಾರೆ. ಹುಬ್ಬಳ್ಳಿಯ ಕೊಪ್ಪೀಕರ್ ರಸ್ತೆಯಲ್ಲಿರುವ ಭಾರತ್ ಬುಕ್ ಡಿಪೋದವರು ಪ್ರಕಾಶಕರಾಗಿದ್ದಾರೆ. ಯಾವ ಇಸವಿಯಲ್ಲಿ ಮುದ್ರಣವಾಯಿತೆಂಬುದನ್ನೇ ತಿಳಿಸಲು ಲೇಖಕರು ಪ್ರಕಾಶಕರು ಮರೆತಿದ್ದಾರೆ. ಇದರಲ್ಲಿ 30 ಜನ ಶರಣರ ಕಾಲಜ್ಞಾನ ವಚನ ಮತ್ತಿತರ ಕೃತಿಗಳಿವೆ. ಇದನ್ನು ಓದಿದಾಗ ನನಗನ್ನಿಸಿತು. ಬಸವಾದಿ ಪ್ರಮಥರ ಕನಸು ದೇವರು-ಧರ್ಮಗಳ ತಳಹದಿಯ ಮೇಲೆಯೇ ಸಮತಾವಾದಿ, ಗುಣ-ಶೀಲ ಪ್ರಧಾನವಾದ ಶರಣಸಮಾಜವನ್ನು ಕಟ್ಟುವುದೇ ಆಗಿತ್ತು. ವಿಚಾರಧಾರೆಯಲ್ಲಿ ಅವರು 8-10 ಶತಮಾನಗಳಷ್ಟು ಮುಂದೆ ಇದ್ದರು. ಅವರ ಪ್ರಖರ ವಿಚಾರಗಳನ್ನು ಅರಗಿಸಿಕೊಳ್ಳುವ ಸಾಮರ್ಥ್ಯ ಅಂದಿನ ಶತಮಾನಕ್ಕೆ ಇರಲಿಲ್ಲ. ಆದರೂ ಲಕ್ಷಾಂತರ ಶರಣರು ಬಸವ ತತ್ತ್ವವನ್ನು ಅರಿತು, ಅಳವಡಿಸಿಕೊಂಡರು. ಮತಾಂಧ ಶಕ್ತಿಗಳಿಂದ ಹಲ್ಲೆಗೊಳಗಾಗಿ ಶರಣರ ಆದರ್ಶ ಸಮಾಜವು ಆಘಾತಕ್ಕೊಳಗಾದಾಗ, ವಿಪತ್ತು ಎರಗಿದಾಗ ಅವರು ಚೆದುರಿದರು.

ಅವರ ಸತ್ಸಂಕಲ್ಪ ದುರ್ಬಲಗೊಳ್ಳಲಿಲ್ಲ. ಅವರು ದೇವನಲ್ಲಿ ಶ್ರದ್ಧೆ ಇಟ್ಟು ಕೊಂಡವರಾಗಿ, ಭವಿಷ್ಯದಲ್ಲಿ ಆಸೆಯನ್ನಿಟ್ಟುಕೊಂಡರು. ನಂತರದ ಜಗತ್ತು ಅವರ ಉದಾತ್ತ ಚಿಂತನೆಯನ್ನು ಅರ್ಥಮಾಡಿಕೊಂಡೇ ತೀರುವುದೆಂದು ಭರವಸೆ ತಾಳಿದರು.

ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆನಬೇಡ
ಮುಂದಣ ಫಲದೊಳಗರಸಿಕೋ!
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆನಬೇಡ
ಮುಂದಣ ಬಣ್ಣದೊಳಗರಸಿಕೋ!
ಹೊತ್ತಿಸಿದ ದೀಪ್ತಿಕೆಟ್ಟಿತ್ತೆನಬೇಡ
ಮುಂದಣ ಅಗ್ನಿಯೊಳಗರಸಿಕೋ!

-ಚೆನ್ನ ಬಸವಣ್ಣ 1000



ಎಂದು ಪರಸ್ಪರ ಸಮಾಧಾನ ಮಾಡಿಕೊಂಡರು. ಶರಣರ ಆ ಆಸೆ ಹಲವಾರು ಭವಿಷ್ಯವಾಣಿ (Prophecy)ಗಳ ರೂಪದಲ್ಲಿ ಅಭಿವ್ಯಕ್ತಗೊಂಡಿದೆ. ಇದು ಕೇವಲ ಆಸೆಯೂ ಅಲ್ಲ, ಕಾಲ ದೇಶಾತೀತ ದೃಷ್ಟಿಹೊಂದಿ ಮುಂದಾಗಲಿರುವುದನ್ನು ಸಮ್ಯಕ್ ದೃಷ್ಟಿಯಿಂದ ಕಂಡೇ ಕಾಲಜ್ಞಾನ ವಚನಗಳನ್ನು ಬರೆದಿರುವ ದಿವ್ಯ ದರ್ಶನ. ಅಂಥ ಕೆಲವು ವಚನ ವಾಕ್ಯಗಳನ್ನು ನೋಡುವಾ.

## ನೀಲಲೋಚನೆಯ ಕಾಲಜ್ಞಾನ

1. ಕಪ್ಪಡಿ ಸಂಗಮ ತಪ್ಪದೇ ಹೇಳಿದಾ
ಅಪ್ಪ ಬಸವಣ್ಣ ಬರುವುದನು ಸುವ್ವಿ।
ಯೇಳನೂರು ಎಪ್ಪತ್ತು ವರುಷಕ್ಕೆ ಬರುತಾನೆ ಸುವ್ವಿ! ಪದ್ಯ 19, ಪುಟ 10

2. ನಾರಿ ಒಬ್ಬಳು ಬಂದು ಭಾರಿ ಅಬ್ಬರ ಹೊತ್ತು
ಆರೂಢ ಭಿಕ್ಷವ ಬೇಡ್ಯಾಳು ಸುವ್ವಿ
ಮತ್ತಿನ್ನು ವೀರ ಬಸವಣ್ಣ ಬರುವಾಗ ಸುವ್ವಿ॥ ಪದ್ಯ 25, ಪುಟ 11

3. ಮೂರು ಹೊನ್ನಿಗೆ ಸೇರು ವಿಭೂತಿ ಮಾರೀತು
ಆರು ಹೊನ್ನಿಗೆ ಒಂದು ಲಿಂಗವು ಸುವ್ವಿ
ಆಯಿತು ನಮ್ಮ ವೀರಬಸವಣ್ಣ ಬರುವಾಗ ಸುವ್ವಿ॥ ಪದ್ಯ 46, ಪುಟ 12

4. ಹದಿನೆಂಟು ಜಾತಿಯು ಶಿವಭಕ್ತರಾದಾರು
ಸದಮಲ ಭಕ್ತಿಜ್ಞಾನವಿಡಿದು ಸುವ್ವಿ
ನಂದಿಯ ಧ್ವಜಗಳು ತಮ್ಮ ಮನೆಮನೆಗೆ ಸುವ್ವಿ॥ ಪದ್ಯ 47, ಪುಟ 12

5. ಬಸವಣ್ಣ ಬರುವಾಗ ಶಶಿಧರನ ಭಕ್ತರು
ಕುಶಲದ ನುಡಿಗಳ ನುಡಿದಾರು ಸುವ್ವಿ
ಮನೆ ಮನೆಗೆ ಬಸವನ ಉತ್ಸವ ಮೆರೆದಾವು ಸುವ್ವಿ॥ ಪದ್ಯ 48, ಪುಟ 12

## ಮುಗ್ಧ ಸಂಗಯ್ಯನವರ ಕಾಲಜ್ಞಾನ

6. ಸತ್ಯ ಶರಣರು ವುಳುವಿಗೆ ಸಾಗಿ ಬಸವಯ್ಯ
ಮಿಥ್ಯಾದಿ ಕಲ್ಯಾಣ ಹಾಳೊ ಬಸವಯ್ಯ

ಮತ್ತೇ ನೀವು ಬರುವದಕ್ಕೆ ಬಸವಯ್ಯ
ಸತ್ಯ ಯೇಳ್ನೂರು ಎಪ್ಪತ್ತುಏಳು ವರುಷ ಬಸವಯ್ಯ।. ಪದ್ಯ 2, ಪುಟ 38

## ಹರಳಯ್ಯನವರ ಧರ್ಮಪತ್ನಿ ಕಲ್ಯಾಣಮ್ಮನ ಕಾಲಜ್ಞಾನ

7. ಆ ಕೈಲಾಸ ಹಾಳಾಗಿ। ಭೂ ಕೈಲಾಸವೆ ತುಂಬಿ
ಶಿಲೆಯ ಪೂಜೆಗಳು ಅಳಿದು।
ಶಿವನು ಪ್ರತ್ಯಕ್ಷವಾಗಿ, ಕರೆದರೆ ಅಲ್ಲಲ್ಲಿ ಓಯೆಂದು
ನಿಜ ಭಕ್ತರಲ್ಲಿ ಪೂಜೆಗೊಳ್ಳುತ್ತ
ಬಸವನ ಉತ್ಸವ ಪಸರಿಸಿ ಮನೆ ಮನೆಗೆ ಲೀಲೆ
ತೀರ್ಥ ಪ್ರಸಾದಗಳು
ಬಸವನೊಬ್ಬನೆ ಗುರುವು। ಶಿವ ತಾನೋರ್ವನೇ ದೇವ
ಪ್ರಭು ಒಬ್ಬನೆ ಜಂಗಮ। ಇಂತು ಗುರು- ಲಿಂಗ- ಜಂಗಮದ
ಹೊರತು ಮಿಕ್ಕ ಉಳಿದವರೆಲ್ಲ ಭಕ್ತರಾಗಿರ್ಪರು॥ ಪದ್ಯ 119, ಪುಟ 124

8. ಹರನ ಭಕ್ತರು ಪರಮನ ನೋಡಲು
ಪರಮ ಪದವಿಯಹುದು !
ಶರಣರೆಲ್ಲರು ನೋಡಿ ಸುಖಿಸುವರು
ಸುಖದ ಸಾಮ್ರಾಜ್ಯ ಪದವಿಯಾಗುವುದು
ಬರಿದೆ ಭ್ರಮೆಯಲ್ಲ, ಜರಿದವರಿಗೆ ನರಕ ತಪ್ಪದು।
ಶರಣರು ಬೇಗನೇ ಬಂದಾರು ಬರಕೊಳ್ಳಿ
ಹೀಗೆಂದು ಹರಳಯ್ಯನ ಪಟ್ಟದ ರಾಣಿಯಾದ
ಕಲ್ಯಾಣಮ್ಮನು ಕಾಲಜ್ಞಾನದಲ್ಲಿ ನೋಡಿ ಹೇಳಿದಳು
ಇದು ಸತ್ಯವು ! ಪದ್ಯ 120, ಪುಟ 124

## ಮಡಿವಾಳ ಮಾಚಯ್ಯನವರ ಕಾಲಜ್ಞಾನ

9. ದಕ್ಷಿಣದ ಕೃಷ್ಣೆಗೆ ಕರೆವರ್ರೈಯ್ಯ ಜನ ನೆರೆವರಯ್ಯ ಪದ್ಯ 7, ಪುಟ 173

10. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
ಜರಿಯಲು ಬೇಡ. ಅರಿದು ನೋಡುವುದು.
ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು॥ ಪದ್ಯ 8, ಪುಟ 173



11. ಹರನಾಜ್ಞೆಯಿಂದ ಯರಕದಾಜ್ಞೆಗಳೆಂದು। ಕರುಳ ಕ್ಯಾತಯ್ಯ ಕೂಗಿ
ಬೊಬ್ಬೆಯನಿಟ್ಟು ಶರಣರೆಲ್ಲರಿಗೆ ಅರಿಕೆ ಮಾಡುತಲಿ
ಉಲಿದು ಕೂಗಿದನು.
ಕಲ್ಯಾಣ ನಲಿವಂತೆ ಬಲ ಬಂತೆಮಗೆ ಉಘೇ ಚಾಂಗು ಭಲ
ಎಂದು ಘನ ಹಿರಿಯರೆಲ್ಲ ಉದಯದೋರುವುದಿನ್ನು
ಮರವಿಯಲ್ಲಿ ಇದ್ದವರು, ರುದ್ರಮುನಿಧರನ ಉದಯವು ಪದ್ಯ 9, ಪುಟ 174

12. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು । ಆನಂದ ಕಡೆಯಾಟ
ಜರಿಯಲು ಬೇಡ। ಶಿವನ ಡಂಗುರವೆಂದು ಕರವೆತ್ತಿ ಕೂಗಿ
ಅಬ್ಬರದಿಂದ ಸಾರಿದ ಹರನಾಗಮ್ಮೆಯ್ಯ
ಧರೆಯ ಭಕ್ತರಿಗಿನ್ನು ಅರಿಕೆ ಮಾಡುತಲಿ
ಬರೆದಿಟ್ಟ ಪತ್ರಗಳು ಜರಿಯಲು ಬೇಡ ,ನರಕ ತಪ್ಪದು ಪದ್ಯ 10, ಪುಟ 174

ಪರಿಧಾವಿ ಸಂವತ್ಸರ ಕ್ರಿ.ಶ. 2032
ಆನಂದ ಸಂವತ್ಸರ ಕ್ರಿ.ಶ. 2034

13. ಹರನಾಜ್ಞೆ ನಿಮಗೆಂದು ಕರದ ಡಂಗುರವ
ಧರೆಯರಿಯೆ ಹೊಡೆದ ಶರಣ ಸೊಡ್ಡಳದೇವ
ಭರವಸವಿನ್ನು ಶರಣರುದಯವು
ನೀವು ಹರಸಿ ಭಸಿತಗಳನವಧರಿಸಿ ಪದ್ಯ 11, ಪುಟ 174

14. ಪ್ರಮಥರುದಯದ ಮುಂದೆ ಆಕರಿಸಿ ಬಂತು
ಅಷ್ಟದಿಕ್ಕುಗಳೊಳಗೆ ವಿವೇಕಗಳ ಮಾಡಿ
ರತ್ನ ಪೂಜಿತವೆಂದು ಈ ಶರಣ ಕಲಿದೇವ
ವಿವೇಕದಲ್ಲಿ ಇಟ್ಟ ವಚನ ಭಾಂಡಾರಗಳ
ಜೋಕೆಯಲ್ಲಿ ಓದಿ ಶಿವನ ಡಂಗುರವೆಂದು ಪದ್ಯ 22, ಪುಟ 176

15. ನಿಮ್ಮ ವಚನ ಭಂಡಾರಗಳು ಪ್ರೀತಿಯಲ್ಲಿ ನೀವು ಓದಿ
ಅಮೃತವೆಂದು ಸಾರವುಳ್ಳ ಶಿವಶರಣರಾಲಿಪುದು
ನೀ ಕರಿಸಬೇಡ ಪದ್ಯ 23, ಪುಟ 176

16. ಆ ಶರಣ ಮಡಿವಾಳ ಮಾಚಯ್ಯ ಬಿಚ್ಚಿಟ್ಟ ನೀತಿಸಾಗರ ಲಿಪಿಯು
ಗೂಢ ಲಿಪಿಗಳು ಎಂದು ಮಾತಾಡಿ
ಮನುಜರ ನಡಿಯಲ್ಲ ಅಸಂಖ್ಯಾತರ ಕಟ್ಟಳೆಯ
ಪರುಷ ಭಾಂಡಾರಗಳು
ಆ ಶರಣರುದಯ ಆನಂದವೇ ಕಡೆಯಾಗಿ ಲೋಕವರಿವಂತೆ
ಕಲಿಯುಗವು ಮುಂದಿನ್ನು ಆದರಿಸಿತೆಂಬೋ
ಹುಸಿಹೋದ ಆಬುದಕರ ನೀತಿಗಳ ಗೆಲಿದು ಪದ್ಯ 34, ಪುಟ 178

17. ಈ ಅನುಭವದ ಆಟದ ವಚನಂಗಳು
ಸೋಜಿಗದ ಗುಣಿತವ ಮಾಡೇನೆಂಬ
ಕರಣದ ಶಬ್ದಕರು ಮುಳುಗುವರು
ಅರವತ್ತು ಕೋಟಿ ತಾರೆಗಳ ಬಲ್ಲ, ಸಪ್ತಗ್ರಹಗಳ ಬಲ್ಲ
ಸೂರ್ಯಮಂಡಲ ಚಂದ್ರಮಂಡಲವೆಂದು
ಜೋತಿಷ್ಯವ ಮಾಡುವ ಪಂಡಿತರು ಮುಳಿಗ್ಯಾರು
ಈ ವಚನದನುಭಾವಗಳ ಜೋಕಿಲಿ ತಳಿದು ಓದುವದು. ಪದ್ಯ 43, ಪುಟ 180

## ಬಡಿ ಹೋರಿ ಬ್ರಹ್ಮಯ್ಯನವರ ಕಾಲಜ್ಞಾನ

18. ದಂಡನಾಯಕ ಹೋದ ರಾಕ್ಷಸನಾಮ ಸಂವತ್ಸರದ
ಹದಿಮೂರು ಬಾರಿ। ತಿರುಗಿ ಬಂದಂದಿಗೆ ಪದ್ಯ 2, ಪುಟ 181

ಚನ್ನಣ್ಣ ಉಳುವಿಗೆ ಹೋದ ಏಳನೂರು ಎಂಭತ್ತು ವರ್ಷ
ತುಂಬಲಂದಿಗೆ ಬಂದು ಚರಿಸುತ್ತಿಹರು ಪದ್ಯ 4, ಪುಟ 181

19. ಘನದನುಭಾವಿಗಳು ಶಿವನ ನೆನಹುಳ್ಳವರು ಶಿವನಂಶಿಕರು
ಶಿವನ ಭಕ್ತರು ಶಿವ ಧ್ಯಾನರು ಸುಶೀಲರು ವ್ರತಸ್ಥರು
ಧರ್ಮಿಗಳು ದಯಾಳುಗಳು ದಯಾಭರಿತರು
ಇಂತೀ ಪುಣ್ಯಾತ್ಮರುಗಳ ರಾಶಿಯ ಮಾಡಿ
ಧರ್ಮದ ಬೀಜವನುಳುಹಿ ಕಣಜವ ಕಟ್ಟಿ
ಧರ್ಮಗುರು ಬಸವಗೊಪ್ಪಿಸಿ ॥ ಪದ್ಯ 62, ಪುಟ 190



## ಗಂಗಮ್ಮನವರು ಹೇಳಿದ ಕಾಲಜ್ಞಾನ

20. ನಮ್ಮಯ್ಯ ಬರುವಾಗ ಉಮ್ಮಯ ಶರಣರು
ಕರ್ಮದ ಲೋಕ ಉಳಿಯಾವು ಸುಪ್ವಿ
ಕರ್ಮದ ಲೋಕ ಉಳಿಯಾವು ಸುಪ್ವಿ
ಧರ್ಮದ ಗುರು ಬಸವನು ಬರುವಾಗ ಸುಪ್ವಿ ॥ ಪದ್ಯ 2, ಪುಟ 216

## ಶ್ರೀ ಚನ್ನ ಬಸವೇಶ್ವರ ದೇವರ ಕಟ್ಟಳೆಯ ಕಾಲಜ್ಞಾನ

21. ಕೇಳಯ್ಯ ರುದ್ರಮುನಿ ದೇವರೇ ನಾವು ಮರ್ತ್ಯಕ್ಕೆ ಬರಬೇಕಾದರೆ
ಏಳುನೂರಾ ಎಂಬತ್ತು ವರುಷ ಬಂದೀತು

## ಕೊಡೈಕಲ್ಲವರು ಹೇಳಿದ ಕಾಲಜ್ಞಾನ

22. ಜಾತಿಜಾತಿಗಳೆಲ್ಲ ಯೇಕಾವಾದಾವಿನ್ನು
ಜ್ಯೋತಿ ಬಸವೇಶನಾಗಮನಕೆ
ಮಾತಿನ ಮಾಲ್ಪೆಂದು ಯೋಚಿಸಿ ಕೆಡಬೇಡ
ಕುಚು ಕುಚು ಮಾಡುವನು ದುರಿತಂಗಳ ॥ ಪದ್ಯ 82, ಪುಟ 237

23. ಕಪ್ಪಡಿಯ ಸೇರುವಲ್ಲಿ ಅಪ್ಪಣೆಯ ಪಡಿಸಿದನು
ಅಪ್ಪಣ್ಣನ ನುಡಿಕೇಳು। ತಪ್ಪದೆ ಇಪ್ಪತ್ತೊಂದು ಆನಂದಕ್ಕೆ ಬರುವೆ
ಈ ನುಡಿಯು ತಪ್ಪದು ಕೇಳೆಂದು ॥ ಪದ್ಯ 91, ಪುಟ 239

24. ನಂದನ ಸಂವತ್ಸರ ಹದಿಮೂರು ಹೋದ ಮೇಲೆ
ಸಂದು ಹೋದ ಮೇಲೆ ಏಳ್ನೂರು ಎಂಭತ್ತು ಮಂದರ ಗಿರಿವಾಸ
ಮರ್ತ್ಯಕ್ಕೆ ಬರುತ್ತಾನೆ। ಹುಸಿಯಲ್ಲವಿದು ಗುರು ಪ್ರಭುದೇವ ಸಾರಿದನು.
ಪದ್ಯ 110, ಪುಟ 240

25. ಅಲ್ಲಿ ಘನಹೊನ್ನ ಅರಳಿ ಮರಕ್ಕೆ ಉಯ್ಯಾಲಿಯಂ ಕಟ್ಟಿ
ಕೈಲಾಸಕ್ಕೆ ಬಿಜಯಂಗೈದರು!
ಮರ್ತ್ಯಕ್ಕೆ ಮತ್ತೆ ಬರುವ ಪಸ್ತಾಪ ವಚನವೇನೆಂದೊಡೆ
ಕುಲಗಿರಿ ನಡುಗ್ಯಾವು। ಕೂವ ಬಯಲಾದಾವು
ವ್ಯಾಪಾರವೆಲ್ಲ ಬಯಲಾಗಿ ನಾಡೆಲ್ಲ ಇರುಕಿನೊಳು ಸತ್ತಿತು

ಅಂದಿಗೆ ಯೇಳ್ನೂರೆಂಭತ್ತು ವರುಷ ಸಂದೀತು
ಆನಂದಕ್ಕೆ ಬಂದೇವು। ಬಾರೆವೆಂಬ ಮಂದಮತಿಗಳು
ಮಾತಲಿ ನಂಬಿಗೆ ಬೇಡ ॥ ಪದ್ಯ 5, ಪುಟ 264

## ಶ್ರೀ ಸಿದ್ಧರಾಮೇಶ್ವರ ದೇವರ ಜೋಗುಳ ಕಾಲಜ್ಞಾನ

26. ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದು ಬಾಯಿಲೆಕ್ಕವನಿಟ್ಟಿ
ಮುಂದೆ ಬರುವುದು ಏಳ್ನೂರು ಎಂಭತ್ತು ವರುಷಕ್ಕೆ ಘಟ್ಟಿ ಪದ್ಯ 2, ಪುಟ 307

- ★ ತಾಯಿ ನೀಲಾಂಬಿಕೆಯ ಹೆಸರಿನಲ್ಲಿ ಬಂದ ಕಾಲಜ್ಞಾನ ವಚನ 19ರಲ್ಲಿ ಏಳು ನೂರಾ ಎಪ್ಪತ್ತು ವರುಷಕ್ಕೆ ಪುನಃ ಬಸವಣ್ಣನವರು ಬರುತ್ತಾರೆ ಎಂಬ ಅಭಿಪ್ರಾಯವಿದೆ.
- ★ 25ರಲ್ಲಿ ಒಂದು ಮಾತಿದೆ, ಒಬ್ಬ ಮಹಿಳೆಯು ಬಂದು ಆರೂಢ ಭಿಕ್ಷವನ್ನು ಕೇಳುತ್ತಾಳೆ. ಆರೂಢ ಭಿಕ್ಷೆ ಎಂದರೆ, ''ನಿಮ್ಮ ಧನ ಕನಕಗಳು ಬೇಕಿಲ್ಲ, ನಿಮ್ಮ ಭಕ್ತಿ, ಅಭಿಮಾನ ಬೇಕು'' ಎಂದು ಅರ್ಥಮಾಡಬಹುದು.
- ★ ಬಸವಣ್ಣನವರು ಬರುವಾಗ ವಿಭೂತಿ-ಇಷ್ಟಲಿಂಗಗಳ ಮಹತ್ವ ಹೆಚ್ಚಿ, ಹೆಚ್ಚಿನ ಜನರು ಧರಿಸುವರು. (ಪದ್ಯ 46)
- ★ ಎಲ್ಲ ಜಾತಿ ಮತ ಪಂಥಗಳವರೂ ಶಿವಭಕ್ತರಾಗುವರು. ಮನೆ ಮನಗಳ ಮೇಲೂ ನಂದಿಯ ಧ್ವಜಗಳು (ಷಟ್ಕೋನ ಸಹಿತ ಬಸವ ಧ್ವಜ) ಹಾರುವವು.
- ★ ಶಿವಭಕ್ತರು ಪರಸ್ಪರ ಕುಶಲದ ಮಾತುಗಳನ್ನಾಡುತ್ತಾರೆ. ಮನೆ ಮನೆಗೂ ಬಸವನ ಉತ್ಸವಗಳು ಮೆರೆಯುತ್ತವೆ.
- ★ ಮುಗ್ಧ ಸಂಗಯ್ಯ ಶರಣರ ಕಾಲಜ್ಞಾನದಲ್ಲಿ, ಸತ್ಯ ಶರಣರು ಉಳುವಿಗೆ ಸಾಗಿದ ಏಳುನೂರಾ ಎಪ್ಪತ್ತು ವರ್ಷಕ್ಕೆ ನೀವು (ಬಸವಣ್ಣನವರು) ಬರುತೀರಿ ಎಂದಿದೆ.
- ★ ಹರಳಯ್ಯನವರ ಧರ್ಮಪತ್ನಿ ಕಲ್ಯಾಣಮ್ಮನ ಕಾಲಜ್ಞಾನದಲ್ಲಿ ಹೀಗಿದೆ: ಕೈಲಾಸ ಎಂಬ ಸತ್ತಾನಂತರ ಸಿಗುವ ಲೋಕದ ಭ್ರಾಂತಿಯಳಿದು, ಭೂಮಿಯನ್ನೇ ಕೈಲಾಸವನ್ನಾಗಿ ಮಾಡುವರು. ಬಸವನ ಉತ್ಸವಗಳು ಮನೆ ಮನೆಗೂ ಪಸರಿಸುವುವು. ಪೂಜೆ, ತೀರ್ಥ ಪ್ರಸಾದ ಸ್ವೀಕಾರ ಮುಂತಾದ ಧಾರ್ಮಿಕ ನಿಯಮಗಳು ಹೆಚ್ಚಾಗುವುವು, ''ಬಸವಣ್ಣನವರೊಬ್ಬರೇ ಧರ್ಮಗುರು, ಇಷ್ಟಲಿಂಗವೇ ಧರ್ಮಲಾಂಛನ, ಪ್ರಭುದೇವರೇ ಜಂಗಮ ಪುಂಗವರು'' ಎಂಬ ನಂಬಿಕೆ ಆಳವಡುವುದು. ಕಲ್ಯಾಣಮ್ಮನ ಇನ್ನೊಂದು ವಚನದಲ್ಲಿ, 'ಶರಣರು ಖಂಡಿತ ಬರುತ್ತಾರೆ.



ಇದು ಭ್ರಮೆಯಲ್ಲ, ಯಾರು ಈ ಮಾತನ್ನು ಜರಿಯುತ್ತಾರೋ ಅವರಿಗೆ ನರಕ ತಪ್ಪದು' ಎಂದು ಹೇಳುತ್ತಾರೆ. ಮತ್ತು ಇದನ್ನು ದಿವ್ಯ ದರ್ಶನದ ಮೂಲಕ ನೋಡಿ ಹೇಳುತ್ತಿರುವುದಾಗಿ ಖಚಿತಪಡಿಸುತ್ತಾರೆ.

ಮಡಿವಾಳ ಮಾಚಿದೇವರು ನುಡಿದ ಒಂದು ವಾಕ್ಯ ಬಹಳ ಗಮನಾರ್ಹವಾಗಿದೆ. ''ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನ ನೆರೆವರ್ಯೆಯ್ಯ'' ಕೂಡಲ ಸಂಗಮ, ಅಲ್ಲಿ ನಡೆಸುವ ಶರಣಮೇಳಕ್ಕಾಗಿ ಹಾಕುವ ಸಭಾಮಂಟಪ , ಇವು ಕೃಷ್ಣಾ ನದಿಯ ದಕ್ಷಿಣ ದಂಡೆಯಲ್ಲಿವೆ. ಇಲ್ಲಿಗೆ ಜನರನ್ನು ಕರೆಯುತ್ತಾರೆ. ಜನ ಇಲ್ಲಿ ನೆರೆಯುತ್ತಾರೆ ಎಂಬ ಅಂದಿನ ಶರಣವಾಣಿ ಇಂದಿನ ಶರಣಮೇಳದ ಮುನ್ಸೂಚನೆಯಲ್ಲವೆ ?

ಅದರ ಮುಂದಿನ ವಚನದಲ್ಲಿ ಮಾಚಿದೇವರು ಹೇಳುವರು, ''ದಕ್ಷಿಣ, ಪೂರ್ವ, ಉತ್ತರ, ಪಶ್ಚಿಮ ಎಲ್ಲ ಕಡೆಗಳಿಂದಲೂ ಶರಣ ಸಮೂಹ ಬರುವುದು. ಈ ಮಾತನ್ನು ಜರಿಯಬೇಡಿರಿ, ಅರಿದು ನೋಡಿರಿ. (ವಚನ ಸಾಹಿತ್ಯವನ್ನು) ಅಮೃತ ರಸಾಯನವೆಂದು ಶರಣ ಸಂತತಿ ತಿಳಿವರು.''

''ಇಷ್ಟು ದಿವಸಗಳ ಕಾಲ ಮರೆಯಲ್ಲಿ ಇದ್ದ ಶರಣರು ಈಗ ಉದಯವಾಗುವರು. ಕಲ್ಯಾಣ ನಲಿವಂತೆ ಬಲವು ಬರುವುದು. ಉಘೇ ಚಾಂಗು ಭಲಾ ಎಂದು ಜಯಘೋಷ ಮಾಡೋಣ.''

ಮಡಿವಾಳ ಮಾಚಿದೇವರ ವಾಣಿ ಹೀಗೆ ಹೇಳುತ್ತದೆ, ''ಪರಿಧಾವಿ (ಕ್ರಿ.ಶ. 2032 ಎಂಬ ಸಂವತ್ಸರದ ಹೊತ್ತಿಗೆ ಉಳಿದವರು ಬಂದು ಸೇರುವರು. ಆನಂದ ನಾಮ ಸಂವತ್ಸರ (ಕ್ರಿ.ಶ.2034)ದ ಹೊತ್ತಿಗೆ ಒಬ್ಬರುಳಿಯದ ಹಾಗೆ ಬರುವರು''. ಇಷ್ಟೇ ಅಲ್ಲ 'ಇದು ಶಿವನ ಡಂಗುರ' ಎಂದು ಆತ್ಮವಿಶ್ವಾಸಪೂರ್ವಕವಾಗಿ ಹೇಳುವರು.

ಪದ್ಯ 10ರಲ್ಲಿ ' ಈ ಮಾತುಗಳು ಬರೆದಿಟ್ಟ ಪತ್ರಗಳು ಎಂದು ತಿಳಿಸುತ್ತಾರೆ. ಶರಣರುದಯದ ಬಗ್ಗೆ ಭರವಸೆ ಕೊಡುತ್ತಾರೆ. ಮಾಚಿದೇವರೇ ಮುಂತಾದ ವೀರ ಶರಣರು ವಿವೇಕದಿಂದ ರಕ್ಷಿಸಿಟ್ಟ ವಚನ ಭಾಂಡಾರಗಳು ಬಹು ಅಮೂಲ್ಯ ಆಸ್ತಿಗಳಾಗುವುವು. ಇವನ್ನು ಜೋಕೆಯಲ್ಲಿ ಓದಿರಿ ಎಂದು ಆದೇಶ ನೀಡುವರು.

ಪದ್ಯ 23 ಮತ್ತು 34 ಇವುಗಳಲ್ಲಿ ಬರುವ ಭಾವ ಹೀಗಿದೆ. ವಚನ ಭಂಡಾರಗಳು ಅಮೃತಸಾರವೆಂದು, ಪ್ರೀತಿಯಿಂದ ಅವನ್ನು ಓದಬೇಕೆಂದು ಹೇಳಿ, ಇವು ನೀತಿ ಸಾಗರ ಲಿಪಿಗಳು ಎನ್ನುವರು, ಈ ವಚನಗಳು ಕೇವಲ ಮನುಷ್ಯರ ನುಡಿಗಳು ಅಲ್ಲವಂತೆ, ಇವು ಲಿಪಿಗಳು ಎನ್ನುವರು. ಈ ವಚನಗಳು ಕೇವಲ ಮನುಷ್ಯರ ನುಡಿಗಳು ಅಲ್ಲವಂತೆ, ಇವು ಕಟ್ಟಳೆಯ (commandments) ಪರುಷ ಭಾಂಡಾರಗಳಂತೆ. ಆದಿ ಶರಣರು ರಚಿಸಿದ ವಚನಗಳು ಎಷ್ಟು ಅಮೂಲ್ಯ ಎಂಬ ಬಗ್ಗೆ ಅವರಿಗೆ ಸಂಪೂರ್ಣ ಅರಿವು-ಅಭಿಮಾನ ಇದ್ದಿತು. ಮುಂದಿನ ಯುಗ ಆದರಿಸುವುದಲ್ಲದೆ, ಉಳಿದ ಹುಸಿಯಾದ ಮಾತು - ಶಾಸ್ತ್ರಗಳನ್ನು ಗೆಲಿದು, ವಚನ ವಾಙ್ಮಯ ಹಬ್ಬುವುದು ಎಂದು ಆತ್ಮವಿಶ್ವಾಸದಿಂದ ನುಡಿಯುವರು.

ವಚನಗಳನ್ನು ಅನುಭಾವದ ಆಟದ ಪ್ರತಿಫಲವೆಂದು ಮಾಚಿದೇವರು ಹೆಸರಿಸಿ, ಇವುಗಳನ್ನು ಅರ್ಥ ಮಾಡಲು ಗಣಿತ ವ್ಯಾಕರಣ ಜ್ಯೋತಿಷ್ಯ ಶಾಸ್ತ್ರ ಪಂಡಿತರಿಗೆ ಸಾಧ್ಯವಾಗದು ಎಂದಿದ್ದಾರೆ. ಪದ್ಯ 43.

ಬಡಿಹೋರಿ ಬ್ರಹ್ಮಯ್ಯನವರು ಶರಣರ ಬರವು ಕುರಿತು ಹೀಗೆ ಹೇಳುವರು. ದಂಡನಾಯಕ ಹೋದ ರಾಕ್ಷಸ ನಾಮ ಸಂವತ್ಸರ (1196) 13 ಬಾರಿ ತಿರುಗಿ ಬಂದಂದಿಗೆ ಬರುವುದಾಗಿ ಹೇಳುವರು. ಒಂದು ಸಂವತ್ಸರ ಚಕ್ರದಲ್ಲಿ 60 ವರ್ಷಗಳು. ಇವು 13 ಬಾರಿಗೆ 780 ವರ್ಷ. ಚೆನ್ನಣ್ಣ ಉಳುವಿಗೆ ಹೋದ ಏಳು ನೂರಾ ಎಂಭತ್ತು ವರ್ಷ ತುಂಬಲಂದಿಗೆ ಬಂದು ಚೆರಿಸುತ್ತಿಹರು ಎಂದು ಹೇಳುವರು.

ಈ ಶರಣನ ಇನ್ನೊಂದು ವಚನ ಪದ್ಯ 62 ಬಹು ಸುಂದರವಾಗಿ ಹೀಗಿದೆ. ಘನದ ಅನುಭಾವಿಗಳು, ಶಿವನ ನೆನಹುಳ್ಳವರು, ಶಿವನ ಅಂಶಿಕರು, ಶಿವನ ಭಕ್ತರು, ಶಿವ ಧ್ಯಾನರು, ಸುಶೀಲರು, ವ್ರತಸ್ಥರು, ಧರ್ಮಿಗಳು ದಯಾಳುಗಳು, ದಯಾಭರಿತರು ಮುಂತಾದವರೆಲ್ಲರು ಒಟ್ಟಾಗುವರಂತೆ. ಇಂತಹ ಪುಣ್ಯಾತ್ಮರುಗಳ ರಾಶಿಯಾಗುವುದಂತೆ. ಶರಣ ಮೇಳವು ಇಂಥ ಪುಣ್ಯಾತ್ಮರುಗಳ ರಾಶಿಯಲ್ಲವೆ ? ''ಧರ್ಮದ ಬೀಜವ ನುಳುಹಿ ಕಣಜವ ಕಟ್ಟಿ, **ಧರ್ಮಗುರು ಬಸವಗೊಪ್ಪಿಸಿ**''.

ಬಡಿಹೋರಿ ಬ್ರಹ್ಮಯ್ಯನವರ ಮಾತು ಎಷ್ಟು ಸತ್ಯ ನೀವೇ ವಿಶ್ಲೇಷಿಸಿರಿ. ಬಸವ ಧರ್ಮ ಪೀಠ, ಶರಣ ಮೇಳಗಳು ಮಾಡುವ ಕಾರ್ಯ ಇದೇ ಅಲ್ಲವೇ ಧರ್ಮದ ಬೀಜವನ್ನು ಉಳುಹಿ, ಅವನ್ನು ಕಣಜವಾಗಿ ಕಟ್ಟಿ ಶರಣ ಬಂಧುಗಳನ್ನು ಧರ್ಮಗುರು ಬಸವಗೆ ಒಪ್ಪಿಸುವುದನ್ನೇ ನಾವೀಗ ಮಾಡುತ್ತಿರುವುದು. ಇದರಿಂದ ಆದಿ ಶರಣರ ಸಂಕಲ್ಪವನ್ನು(ಆಸೆಯನ್ನು) ನಾವು ಪೂರೈಸುತ್ತಲಿದ್ದೇವೆ.

''ನಮ್ಮಯ್ಯ ಬರುವಾಗ ನಿರ್ಮಲಾತ್ಮರಾದ ಶರಣರು ಬರುವರು. ಆಗ ಕರ್ಮದ ಲೋಕ ಉಳಿಯವು'' ಎಂದು ನುಡಿದ ಗಂಗಮ್ಮನು ಧರ್ಮದ ಗುರು ಬಸವನು ಬರುವಾಗ ಕರ್ಮಗಳು ಹರಿಯುವವು ಎನ್ನುವಳು.

ಪುಟ 219 ರಲ್ಲಿ ಚೆನ್ನಬಸವಣ್ಣನವರು, ನಾವು ಮರ್ತ್ಯಕ್ಕೆ ಬರಬೇಕಾದರೆ 780 ವರುಷ ಬಂದೀತು ಎನ್ನುವರು.

ಕೊಡ್ಯೆಕಲ್ ಶರಣರು ಹೇಳುವ ಕಾಲಜ್ಞಾನದಲ್ಲಿ 'ಜ್ಯೋತಿ ಬಸವೇಶನಾಗಮನದ ಸಮಯಕ್ಕೆ ಜಾತಿಜಾತಿಗಳೆಲ್ಲ ಏಕಾದಾವು ಎನ್ನುವರು. ನಂದನ ಸಂವತ್ಸರ 13 ಬಾರಿ ಹೋದ ಮೇಲೆ, 780 ವರ್ಷಕ್ಕೆ ಶರಣರು ಬರುವರು ಎಂಬುದಾಗಿಯೂ ಹೇಳುವರು.



ಸಿದ್ಧರಾಮೇಶ್ವರ ದೇವರ ಜೋಗುಳ ಕಾಲಜ್ಞಾನದಲ್ಲಿ ಸಹ 780 ವರುಷಕ್ಕೆ ಬರುತ್ತೇವೆ ಎಂದಿದೆ ಮತ್ತು ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದು ಎಂಬ ವರ್ಷದ ಉಲ್ಲೇಖ ಮಹತ್ವಪೂರ್ಣವಾಗಿದೆ. ಪದ್ಯ 2, ಪುಟ 307.

ಮಾರಿ ಬಂದಳು ಮರ್ತ್ಯ ಲೋಕದ ಹಿಂದೆ
ಸಾರಿ ಬಂದವು ನಮ್ಮ ದಿನಗಳು ಮುಂದೆ
ನಾವು ಬಂದಂದಿಗೆ ನೀವು ಬಂದಿರಿ
ನಾವೂ ನೀವೂ ಕೂಡಿ ಬಂದೊದಗಿದ
ಹದಿಮೂರು ಆನಂದವೆನ್ನಿ ಜೋ ಜೋ.॥ ಪದ್ಯ 6, ಪುಟ 307

ಪುಟಕ್ಕೆ ಚೆನ್ನಬಸವಣ್ಣ ಬಂದಾ
ಇಂದುಧರನಾ ಪೂಜೆ ಮಾಡುವದಾನಂದಾ
ಬಂದ ಗಣಂಗಳ ದರುಶನದಿಂದಾ
ಮುಂದೆ ಬರುವ ಆನಂದ ಪರಿಪೂರ್ಣವೆಂದಾ॥ ಪದ್ಯ7, ಪುಟ 307

ಗುರು ಬಸವಣ್ಣನವರು ಕಲ್ಯಾಣವನ್ನು ಬಿಟ್ಟುದು ರಾಕ್ಷಸನಾಮ ಸಂವತ್ಸರ ಕ್ರಿ.ಶ.1196, ಫಾಲ್ಗುಣ ಮಾಸ, ದ್ವಾದಶಿ ದಿವಸ, ಚೆನ್ನಬಸವಣ್ಣನವರು ಉಳುವಿಗೆ ಹೊರಟದ್ದು ಆಗಲೆ, ತಲುಪಿದ್ದು ನಳನಾಮ ಸಂವತ್ಸರದಲ್ಲಿ, ಆ ಸಮಯದಿಂದ ಮುಂದೆ 770ವರ್ಷಗಳು ಸಂದ ಬಳಿಕ ಬರುತ್ತೇವೆ ಎಂದು ಅಸಂಖ್ಯಾತ ಶರಣರು ಹೇಳಿದ್ದಾರೆ. 780 ವರ್ಷಗಳು ಸಂದ ಬಳಿಕ ಬರುತ್ತೇವೆ ಎಂದು ಹಲವಾರು ಶರಣರು ಹೇಳಿರುವುದು ಆಶ್ಚರ್ಯಕರವಾಗಿದೆ.

ಸಿದ್ಧರಾಮೇಶ್ವರರು ಹೇಳುವ ಮಾತು, ''ನಮ್ಮ ದಿನಗಳು ಮುಂದೆ ಇವೆ'' ಎಂಬ ಮಾತು ನಮ್ಮೆಲ್ಲರ ಕಣ್ತೆರೆಸುತ್ತವೆ. ಕೃಷ್ಣಾ ನದಿಯ ದಂಡೆಗೆ ಜನರನ್ನು ಕರೆಯುವರು, ಅಸಂಖ್ಯಾತರು ಬರುವರು ಎಂದು ಹೇಳಿದ ಮಾಚಿದೇವರು, ಪರಿಧಾವಿ ಸಂವತ್ಸರದ ಹೊತ್ತಿಗೆ (ಕ್ರಿ.ಶ. 2032-33) ಮೂಲೆ ಮೂಲೆಯಿಂದ ಬರುವರು ಎಂದು ಭವಿಷ್ಯ ನುಡಿದಿದ್ದಾರೆ.

''13 ಆನಂದಕ್ಕೆ ಬರುತ್ತೇವೆ, ನಾವು ನೀವೆಲ್ಲ ಎಂದು ಸಿದ್ಧರಾಮೇಶ್ವರರು ಹೇಳುವರು. ಬಸವಣ್ಣನವರ ಕಾಲದಲ್ಲಿ ಬಂದ ಎರಡನೆಯ ಆನಂದನಾಮ ಸಂವತ್ಸರ ಕ್ರಿ.ಶ. 1194 ಅವರು ಹುಟ್ಟಿದ್ದು 1134. ಅದೂ ಆನಂದನಾಮ ಸಂವತ್ಸರವೇ. ಅಲ್ಲಿಂದ 13 ಆನಂದಗಳು ಎಂದರೆ 13x60=780. 1194+780=1974ನೆಯ ಇಸವಿ. ಗುರು ಬಸವಣ್ಣನವರ ನಂತರ 770 ವರ್ಷಗಳು ಅಂದರೆ 1196+770=1966 ಸರಿ ಸುಮಾರು ಇಲ್ಲಿಂದ ಶರಣರ ಉದಯ,

ಶರಣರ ಯುಗಾರಂಭ. ಹಿಂದೆ ಹತ್ತು (1+9) ಮುಂದೆ ಹನ್ನೊಂದು (3+8) ಎಂಬ ಮಾತಿಗೂ, ದಂಡ ನಾಯಕರು ಕಲ್ಯಾಣ ಬಿಟ್ಟು 770 ವರ್ಷಕ್ಕೆ ಶರಣರ ಉದಯ ಎಂಬ ಮಾತಿಗೂ ಎಷ್ಟು ಹೋಲಿಕೆ ಇದೆ ನೋಡಿರಿ. ಹಿಂದೆ ಹತ್ತು ಮುಂದೆ ಹನ್ನೊಂದು ಆಗುವ ಇಸವಿಗಳು ಹೀಗಿವೆ. 1938, 1947, 1956, 1974, 1983, 1992 ಈ ಇಸವಿಯಲ್ಲಿ ವಿಶೇಷ ಪ್ರಸಂಗಗಳು ಘಟಿಸಿರಲೂ ಬಹುದು. ಈ ಬಗ್ಗೆ ಆಸಕ್ತರು ಅಧ್ಯಯನ ಮಾಡಬಹುದು. 1947 ಸ್ವಾತಂತ್ರೋತ್ಸವ (ಅದೂ ಧಾರ್ಮಿಕ ದೃಷ್ಟಿಯಿಂದ ಮಹತ್ವಪೂರ್ಣವೆ!) ಪೂಜ್ಯರಾದ ಗುರೂಜಿಯವರು ಸ್ವಯಂ ಪ್ರೇರಣೆಯಿಂದ ಜ್ಞಾನಸನ್ಯಾಸವನ್ನು ತೆಗೆದುಕೊಂಡುದು ನವೆಂಬರ್ 19, 1956 ರಂದು, ಅಕ್ಕಮಹಾದೇವಿಯ ಆದೇಶದಂತೆ ಆಧ್ಯಾತ್ಮ ಪಥಕ್ಕೆ ಬರಲು ನಿರ್ಧರಿಸಿ ನಾನು ದೀಕ್ಷೆಯನ್ನು ಪಡೆದುದು 1965 ರಲ್ಲಿ, 1974 ರಲ್ಲಿ ಅಸಂಖ್ಯಾತ ಪುಸ್ತಕಗಳು ರಚನೆಯಾದವು. 1992 ರಲ್ಲಿ ಮಹತ್ವಪೂರ್ಣ ಘಟನೆ ಎಂಬಂತೆ ಬಸವ ಧರ್ಮದ ಮಹಾ ಜಗದ್ಗುರು ಪೀಠ ಸ್ಥಾಪನೆಯಾಯಿತು.

ಶರಣರು ತಮ್ಮ ಕಾಲಜ್ಞಾನದಲ್ಲಿ ಹದಿಮೂರು ಆನಂದಕ್ಕೆ ಬರುತ್ತೇವೆ ಎಂದು ಹೇಳಿರುವುದು ಬಹಳ ಸೋಜಿಗದ ಮಾತು. ಧರ್ಮ-ಆಧ್ಯಾತ್ಮ ಅತೀಂದ್ರಿಯಾನುಭವ ಮುಂತಾದವುಗಳಲ್ಲಿ ವಿಶ್ವಾಸವಿಲ್ಲದ ನಾಸ್ತಿಕರು ಏನಾದರೂ ತಿಳಿಯಲಿ, ಶರಣರು ಅತೀಂದ್ರಿಯಾನುಭವದಿಂದ ಹೇಳಿದ ದಾರ್ಶನಿಕವಾಣಿಯು ಇಂದು ಸತ್ಯವಾಗುತ್ತಿರುವುದು ಬಹಳ ಪವಾಡ ಸದೃಶ. ದಂಡ ನಾಯಕರು ಕಲ್ಯಾಣವನ್ನು ತೊರೆದು ಹೋದ 13 ಆನಂದಕ್ಕೆ ತಿರುಗಿ ಬರುತ್ತೇವೆ.'' ಎಂಬ ಶರಣವಾಣಿಯ ಹಿನ್ನೆಲೆಯಲ್ಲಿ ನೋಡಿದರೆ ವಚನ ಸಾಹಿತ್ಯವು 20 ನೆಯ ಶತಮಾನದಲ್ಲಿ ಅತ್ಯಂತ ವೇಗವಾಗಿ ಜಾತಿಮತ ಪಂಥಧರ್ಮಾತೀತವಾಗಿ ಹಬ್ಬುತ್ತಿದೆ, ಪ್ರಭಾವ ಬೀರುತ್ತಿದೆ. ಇದು ಆದಿ ಶರಣರ ಸತ್ಸಂಕಲ್ಪದ ಫಲವೇ ಸೈ; ಅದೇ ಅಸಂಖ್ಯಾತ ಜನರಲ್ಲಿ ಸತ್‌ಪ್ರೇರಣೆಯನ್ನು ನೀಡುತ್ತ ಅವರನ್ನು ದಿವ್ಯಸಂದೇಶ ವಾಹಕರನ್ನಾಗಿ ಮಾಡುತ್ತಿದೆ.

ಮಳೆಯು ಬೀಳುತ್ತದೆ. ನಾವು ಇನ್ನೂ ಏನನ್ನೂ ಬಿತ್ತಿರುವುದೇ ಇಲ್ಲ. ಆದರೂ ಮೊಳಕೆಗಳೊಡೆದು ಸಸಿಗಳು ತಲೆ ಎತ್ತುತ್ತವೆ. ಇದು ಹೇಗೆ ಎಂದು ಆಶ್ಚರ್ಯವಾಗುತ್ತದೆ. ನಂತರ ಹೊಳೆಯುತ್ತದೆ ಈ ಬಿತ್ತುವಿಕೆ ಈಗಿನದಲ್ಲ ಹಿಂದಿನ ವರ್ಷದ್ದು ಎಂದು ಅದೇ ರೀತಿ ಈಗ ವಚನ ವಾಙ್ಮಯ ಪ್ರಸಾರ ಅತ್ಯಧಿಕವಾಗುತ್ತ ಶರಣ ಧರ್ಮದ ಅಭಿಮಾನ ಹಬ್ಬುತ್ತಿದ್ದರೆ ಅದು ಅಂದು ಶರಣರು ಬಿತ್ತಿದ ಸತ್ ಸಂಕಲ್ಪದಿಂದಲೇ ಎಂದು ನಾವು ಊಹಿಸಬಹುದು.



ಬಸವಾದಿ ಪ್ರಮಥರು ಬರುವರು ಎಂದರೆ ಅವರೇ ಶರೀರಧಾರಿಗಳಾಗಿ ಹುಟ್ಟುವರು ಎಂದಲ್ಲ, ಅವರ ವಾಙ್ಮಯವು ಪ್ರಚಾರಕ್ಕೆ ಬರುತ್ತದೆ; ಅವರ ಕರುಣೆಯನ್ನು ಪಡೆದುಕೊಂಡ ಅನೇಕರು ಧರ್ಮ ಪ್ರಚಾರಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡು ದುಡಿಯುತ್ತಾರೆ. ಶರಣರ ಸಂಕಲ್ಪ, ಅಪೇಕ್ಷೆಗಳನ್ನು ಪೂರೈಸಲು ಅವರ ಅಂಗಾಂಗಗಳಂತೆ ದುಡಿಯುತ್ತಾರೆ. ಶರಣೋದಯ ಯುಗವು 20ನೆಯ ಶತಮಾನವಾದರೆ, 21 ನೆಯ ಶತಮಾನ ಶರಣ ಯುಗವೇ ಆಗಬಹುದು. ವಚನ ಶಾಸ್ತ್ರ ಪಿತಾಮಹ ಶರಣ. ಫ.ಗು. ಹಳಕಟ್ಟಿಯವರು ಪ್ರಕಟಿಸಿದ ವಚನ ಶಾಸ್ತ್ರಸಾರ (ಮೊದಲ ಆವೃತ್ತಿ 1923)ದ ಪ್ರಕಟಣೆಯಿಂದಲೇ ಶರಣೋದಯ ಯುಗ ಆರಂಭವಾಗಿ, ಜೊತೆಗೆ ನವ ಕಲ್ಯಾಣ ಮಠದ ಶ್ರೀ ಗುರುಸಿದ್ಧ ಪ್ರಭುದೇವರಂತಹವರಿಂದ ಒಂದು ಆಂದೋಲನವಾಗಿ ರೂಪು ತಳೆಯುತ್ತ, ಕರ್ನಾಟಕ ವಿಶ್ವ ವಿದ್ಯಾಲಯವು ಹಮ್ಮಿಕೊಂಡ ವಚನ ವಾಙ್ಮಯ ಪ್ರಕಟನೆಯಿಂದ ಒಡಲು ತುಂಬಿಕೊಂಡು ಇಂದು ಬಸವ ಯುಗವಾಗಿ ಶಕ್ತಿ ಸಂಚಯ ಮಾಡಿಕೊಂಡಿದೆ. ಬಸವ ಧರ್ಮದ ಮಹಾಜಗದ್ಗುರು ಪೀಠ ಸ್ಥಾಪನೆಯು ವಚನ ವಾಙ್ಮಯ ಯುಗದ ಕೀರ್ತಿ ಕಳಸವಾಗಲಿದೆ. ಈ ಪೀಠ ಸ್ಥಾಪನೆಯ ಹಿಂದೆ ಹಮ್ಮಿಲ್ಲ, ಶರಣಾಗತಿ ಇದೆ; ಬಸವಾದಿ ಪ್ರಮಥರ ಆಶೋತ್ತರ, ಸತ್ಸಂಕಲ್ಪಗಳನ್ನು ಪೂರೈಸುವುದಕ್ಕೆ ಬದ್ಧ ಕಂಕಣರಾಗುವ ಸದಿಚ್ಛೆಯಿದೆ. ಲಿಂಗವಂತ ಧರ್ಮದ ಮಹಾಮನೆಯಲ್ಲಿ ಅವಿಚ್ಛಿನ್ನವಾಗಿ ಗೌರವಿಸಲ್ಪಡುತ್ತಿದ್ದ ಅಪ್ಪ ಬಸವಣ್ಣ, ಅವ್ವ ವಚನಾಂಬಿಕೆಯನ್ನು, ಏನು ಸ್ವಾರ್ಥಿಗಳು ಕೆಳಗಿಳಿಸಿ ದೂರಮಾಡಿದ್ದರೋ ಆ ಸಂಚಿನ ಹಿಂದಿರುವ ಧೂರ್ತತೆ ಗುರುತಿಸಿ, ಪುನಃ ಅವರನ್ನು ಧರ್ಮಪೀಠಕ್ಕೆ ಕುಳ್ಳಿರಿಸುವುದೇ ಆಗಿದೆ. ಮತ್ತು ಸ್ವಾರ್ಥಿಗಳ ಆ ಸಂಚನ್ನು ಬಯಲು ಮಾಡಿ, ಅಪ್ಪ ಅವ್ವರ ಸ್ಥಾನವನ್ನು ಗುರುತಿಸಿಕೊಟ್ಟ ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳೇ ಈ ಪೀಠದ ಪ್ರಥಮ ಅಧಿಕಾರಿಗಳಾದುದು ಅತ್ಯಂತ ಸೂಕ್ತವು, ಬಸವ ಸಂಕಲ್ಪದ ಈಡೇರಿಕೆಯೂ ಆಗಿದೆ.

1955ರ ಏಪ್ರಿಲ್ 25ರ ಬಸವ ಜಯಂತಿಯಂದು, ಅಪ್ಪ ಬಸವಣ್ಣನವರು ಸಂಗಮೇಶನನ್ನು ತಮ್ಮ ಕಾರ್ಯಕ್ಕಾಗಿ ಆರಿಸಿಕೊಂಡರು, ಅನುಗ್ರಹಿಸಿದರು. 36ವರ್ಷಗಳ ಬಸವ ಸೇವೆಯನ್ನು ಗುರುತಿಸಿ ಇಂದು ಶರಣರ ಬಳಗ (ಬಸವ ಧರ್ಮ ಸಂಸತ್) ಪೂಜ್ಯರನ್ನು ಪ್ರಥಮ ಪೀಠಾಧಿಕಾರಿಯನ್ನಾಗಿ ಆರಿಸಿತು, ಆರೋಹಣ ಮಾಡಿಸಿತು.

ಈ ಮೂಲಕ ಧರ್ಮ ಗುರು, ದೀಕ್ಷಾಗುರು ಉಭಯತರ ಋಣವನ್ನು ಒಂದು ಎಳ್ಳುಕಾಳಿನಷ್ಟು ತೀರಿಸಲು ನಮಗೆ ಸಾಧ್ಯವಾಯಿತು. ಧರ್ಮಗುರುವಿನ ಹೆಸರಿನಲ್ಲಿ ಧರ್ಮಪೀಠ ಒಂದಿರದ ಕೊರತೆಯನ್ನು ನೀಗಿಸಿ ಧರ್ಮಗುರುವಿನ ಋಣವನ್ನು ತೀರಿಸಿದರೆ, ವಚನ ಸಾಹಿತ್ಯ ಸಂವಿಧಾನದ ನೆರವಿನಿಂದ ಮಹಿಳಾ ಜಗದ್ಗುರು ಪೀಠವನ್ನು (1970ರಲ್ಲಿ) ಸ್ಥಾಪಿಸಿ ಮಹಿಳೆಯರ ಗುರುತ್ವವನ್ನು ಗೌರವಿಸಿದ ದೀಕ್ಷಾಗುರುಗಳ ಋಣವನ್ನು ಕಿಂಚಿತ್ ತೀರಿಸಿದಂತಾಯಿತು.

800 ವರ್ಷಗಳ ಇತಿಹಾಸದ ದೃಷ್ಟಿಯಿಂದಲೂ ಬಸವ ತತ್ತ್ವಾನುಯಾಯಿಗಳ ಸಂಘಟನೆ, ಸಂಸ್ಕರಣೆಯ ದೃಷ್ಟಿಯಿಂದಲೂ ಈ ಘಟನೆ ಮಹತ್ವಪೂರ್ಣ. ತನ್ನ ಕಾರ್ಯಪೂರ್ತೆಕೆಗೆ ಅಪ್ಪ ಬಸವಣ್ಣನವರು ನಮ್ಮಗಳನ್ನು ಆರಿಸಿಕೊಂಡಿದ್ದಕ್ಕೆ ಹೆಮ್ಮೆ ಇದೆ, ಹಮ್ಮಿಲ್ಲ. ಮಕ್ಕಳಲ್ಲಿ ಮೂರು ಪ್ರಕಾರವಿರುತ್ತಾರೆ. 1. ಅಪ್ಪ - ಅಮ್ಮರ ಋಣ ತಿಂದೂ ಸಂಪೂರ್ಣ ಅವರನ್ನು ಮರೆತವರು. 2. ಆಸ್ತಿ- ಪಾಸ್ತಿ ಕೊಟ್ಟುದಕ್ಕಾಗಿ- ಕೊಡುತ್ತಾರೆಂದು (ತೋರಿಕೆಯ) ಪ್ರೀತಿ ಮಾಡುವವರು 3. ಜನ್ಮ ಕೊಟ್ಟುದಕ್ಕೆ, ವಿದ್ಯೆ ಕೊಟ್ಟುದಕ್ಕಾಗಿ ಹೃದಯ ತುಂಬಿ ಪ್ರೀತಿಸುವವರು. ಲಿಂಗವಂತ ಸಮಾಜದಲ್ಲಿ ಒಂದು ವರ್ಗದ ಮಠಾಧಿಕಾರಿಗಳಿದ್ದಾರೆ, ಅವರು ವಚನ ವಾಙ್ಮಯವನ್ನು, ಗುರು ಬಸವಣ್ಣನವರನ್ನು ಊಟಕ್ಕೆ ಉಪ್ಪಿನಕಾಯಿಯಂತೆ ಬಳಸಿಕೊಂಡು, ಗೌರವಿಸುವಲ್ಲಿ ಮಾತ್ರ ಮೂಗುಮುರಿದು ದ್ವೇಷಿಸುವವರು.

ಇನ್ನೊಂದು ವರ್ಗದವರಿದ್ದಾರೆ, ಅವರು ಬಸವ ಪರಂಪರೆಯವರೆಂದು ಹೇಳಿ, ವಚನ ವಾಙ್ಮಯ ಸಂಪತ್ತಿಗೆ ವಾರಸುದಾರರಾಗಿದ್ದರೂ ಏಕ ನಿಷ್ಠೆ, ಅಂತಃಕರಣ ಪೂರ್ವಕ ಭಕ್ತಿ ಇಲ್ಲದವರು.

ಇಂದು ನಮಗೆ ಅಪ್ಪನಿಂದ ಯಾವ ಆಸ್ತಿ (ಸಂಪ್ರದಾಯ ಮಠ) ಬಂದಿರದಿದ್ದರೂ ಆತ ಕೊಟ್ಟ ಧರ್ಮಕ್ಕಾಗಿ, ಸಿದ್ಧಾಂತಕ್ಕಾಗಿ, ಮಾನವಕುಲದ ಏಳ್ಗೆಯ ಬಗ್ಗೆ ಆ ಗುರುವು ಹೊಂದಿದ್ದ ಕಳಕಳಿಗಾಗಿ ಅಪ್ಪ ಬಸವಣ್ಣ, ಅವ್ವ ವಚನಾಂಬಿಕೆಯನ್ನು ಆರಾಧಿಸುತ್ತಿದ್ದೇವೆ, ಪ್ರೀತಿಸುತ್ತಿದ್ದೇವೆ; ಪ್ರಾಣಾರ್ಪಣೆಗೂ ಸಿದ್ಧರಿದ್ದೇವೆ. ಇಂಥ ಸಮರ್ಪಣ ಮನೋಭಾವ ಕೊಟ್ಟುದಕ್ಕಾಗಿಯೇ ಆ ತಂದೆಯನ್ನು ವಂದಿಸಿ, ಕೃತಜ್ಞತೆಯನ್ನು ಸಲ್ಲಿಸಿ ಈ ಬರಹಕ್ಕೆ ಪೂರ್ಣ ವಿರಾಮ ನೀಡುವೆ.

– ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕೂಡಲ ಸಂಗಮ

## ಬಸವಣ್ಣ ನಡೆದುದೇ ಮಾರ್ಗ, ನುಡಿದುದೇ ವೇದ

ಭಕ್ತಿಯ ಕುಳವನು ಬಸವಣ್ಣನೇ ಬಲ್ಲನು.
ಪ್ರಸಾದದ ನೆಲೆಯನು ಬಸವಣ್ಣನೇ ಬಲ್ಲನು.
ಬಸವಣ್ಣ ನಡೆದುದೇ ಮಾರ್ಗ ಅಖಿಳಗಣಂಗಳಿಗೆ
ನುಡಿದುದೇ ವೇದ ಮಹಾಪುರುಷರಿಗೆ.



## ಸುಯಿಧಾನ ಸುಗ್ರಂಥಮಾಲೆಯ ಪ್ರಕಟಣೆಗಳಲ್ಲಿ ದೊರೆಯುವ ಪುಸ್ತಕಗಳು

| ಗ್ರಂಥದ ಹೆಸರು | ಲೇಖಕರು | ರೂ.ಪೈ |
|---|---|---|
| 1. ದೇವರು | ಸ್ವಾಮಿ ಲಿಂಗಾನಂದ | 13-00 |
| 2. ದೇವಪೂಜಾ ವಿಧಾನ | " | 22-00 |
| 3. ಅಕ್ಕನ ಪ್ರವಚನ | " | 95-00 |
| 4. ಚೆನ್ನಮ್ಮಲಾದ್ರಿಯ ಚಿತ್ಕಳೆ ★ | " | 60-00 |
| 5. ಸಾಮೂಹಿಕ ಪ್ರಾರ್ಥನೆ | " | 8-00 |
| 6. ಹಿಂದು ಯಾರು ? | ಮಾತೆ ಮಹಾದೇವಿ | 18-00 |
| 7. ಬಸವ ವಚನ ಸುಧಾ | " | 18-00 |
| 9. ಮಾತೃ ಹರಕೆ | " | 70-00 |
| 10. ವಚನಾಮೃತ | ಸ್ವಾಮಿ ಲಿಂಗಾನಂದ | 18-00 |
| 11. ಕಲ್ಯಾಣ ಕ್ರಾಂತಿ | ಮಾತೆ ಮಹಾದೇವಿ | 30-00 |
| 12. ದೇವರ ಮಕ್ಕಳು | " | 18-00 |
| 13. ಪತಿತೋದ್ಧಾರಕ | " | 8-00 |
| 14. ಲಿಂಗಾಯತ ಧರ್ಮ ಕೈಪಿಡಿ | " | 15-00 |
| 15. A Guide to Lingayatism | " | 10-00 |
| 16. A Revolution in Kalyana* | " | 10-00 |
| 17. ಹೆಪ್ಪಿಟ್ಟ ಹಾಲು (ಕಾದಂಬರಿ) | " | 60-00 |
| 18. ಆಧ್ಯಾತ್ಮ ಮತ್ತು ಮಹಿಳೆ | " | 5-00 |
| 19. ತರಂಗಿಣಿ (ಅಕ್ಕಮಹಾದೇವಿ ಕುರಿತು ಕಾದಂಬರಿ) | | 200-00 |
| 20. ವಿಶ್ವ ವಿಭೂತಿ ಬಸವಣ್ಣ | " | 15-00 |
| 21. Lingayatism | " | 6-00 |
| 22. ವಿಶ್ವ ಕಲ್ಯಾಣ ಗೀತೆ | " | 15-00 |
| 23. ಧರ್ಮ ಕ್ರಾಂತಿಯ ಧೀರಯೋಗಿ | " | 4-00 |
| 24. Mataji - A Profile * | " | 5-00 |
| 25. ಬಸವ ಚರಣಕೆ ನುಡಿ ನೈವೇದ್ಯ ★ | " | 5-00 |
| 26. ವಿಶ್ವಗುರು ಬಸವಣ್ಣನವರ ಜೀವನ ಚರಿತ್ರೆ | | 24-00 |
| 27. ಪಂಚಧಾರೆ | " | 6-00 |
| 28. ಒಲಿದು ಹಾಡಿದ ಗೀತೆ | " | 16-00 |
| 29. ವಚನ ನವನೀತ | ಸ್ವಾಮಿ ಲಿಂಗಾನಂದ | 24-00 |
| 30. ಹೃದಯ ವೀಣೆ ಮೀಂಟಿದಾಗ | ಮಾತೆ ಮಹಾದೇವಿ | 20-00 |